# ಬಂಡವಾಳಶಾಹಿ ಅಭಿವೃದ್ಧಿ ಮತ್ತು ಶೈಕ್ಷಣಿಕ ರಚನೆ

**ಸಾಮ್ಯುಯೆಲ್ ಬೊವೆಲ್ಸ್**

ಮ್ಯಾಸುಚುಸೆಟ್ಸ್ ವಿಶ್ವವಿದ್ಯಾನಿಲಯ, ಅಮ್‌ಹರ್ಸ್ಟ್

***

**ಸಾರಾಂಶ ;** ಈ ಪ್ರಬಂಧವು ಬಂಡವಾಳಶಾಹಿಯ ಪರಿಧಿಯಲ್ಲಿರುವ ಕ್ರೂಢೀಕರಣ ಪ್ರಕ್ರಿಯೆ ಹಾಗೂ ಶೈಕ್ಷಣಿಕ ಬದಲಾವಣೆಯ ಒಂದು ಸೈದ್ಧಾಂತಿಕ ಪಕ್ಷಿನೋಟವನ್ನು ನೀಡುತ್ತದೆ. ಶಾಲಾ ವ್ಯವಸ್ಥೆಯು ಬಂಡವಾಳಶಾಹಿ ವರ್ಗದ ಹಿತಾಸಕ್ತಿಯನ್ನು (ಅ) ಬಂಡವಾಳಶಾಹಿ ಹಾಗೂ ಬಂಡವಾಳಶಾಹಿಯೇತರ ಉತ್ಪಾದನಾ ವಿಧಾನಗಳ ನಡುವಿನ ಶ್ರಮದ ಹರಿಯುವಿಕೆಯನ್ನು ನಿಯಂತ್ರಿಸುವ ಮೂಲಕ, (ಆ) ಬಂಡವಾಳಶಾಹಿಗೆ ಅನುಕೂಲವಾಗುವಂತೆ ಶ್ರಮದ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ, (ಇ) ಬಹುಸಂಖ್ಯಾತ ವರ್ಗ;ಪ್ರಜ್ಞೆಯನ್ನು ಹೊಂದಿರುವ ಕಾರ್ಮಿಕರು ಅಥವಾ ರೈತ;ಕಾರ್ಮಿಕರ ಒಕ್ಕೂಟವಾಗದಂತೆ ನೋಡಿಕೊಳ್ಳುವ ಮೂಲಕ ಮತ್ತು (ಈ) ಪಾರಂಪರಿಕ ಗಣ್ಯರ ತಾತ್ವಿಕ ಮತ್ತು ರಾಜಕೀಯ ಮಹತ್ವವನ್ನು ಅಲ್ಲಗಳೆಯುವುದರ ಮೂಲಕ ಬಂಡವಾಳಶಾಹಿ ವರ್ಗದ ಹಿತಾಸಕ್ತಿಗೆ ಪೂರಕವಾಗಿರುತ್ತದೆ ಎಂದು ಲೇಖಕರು ವಾದಿಸುತ್ತಾರೆ. ಪ್ರಭುತ್ವವು ಮೂಲಭೂತವಾಗಿ ಬಂಡವಾಳಶಾಹಿ ವರ್ಗದ ಹಿತಾಶಕ್ತಿಯನ್ನು ಪ್ರತಿನಿಧಿಸುವ ಶೈಕ್ಷಣಿಕ ನೀತಿಗೆ ಪ್ರಧಾನ್ಯತೆ ನೀಡುವುದು ಮೇಲಿನ ಉದ್ದೇಶಗಳಿಗಾಗಿಯೇ ಹೊರತು ಸಮಾನತೆಗೆ ಇರುವ ಬದ್ಧತೆಯಾಗಲಿ ಅಥವಾ ಆರ್ಥಿಕ ಬೆಳವಣಿಗೆಯನ್ನು ಗರಿಷ್ಟಗೊಳಿಸುವುದಕ್ಕಾಗಲಿ ಅಲ್ಲ ಎನ್ನುವ ಪ್ರತಿಪಾದನೆಗೆ ಪೂರಕವಾಗಿರುವ ಅಂಕಿಅಂಶಗಳನ್ನು ಕೊಡಲಾಗಿದೆ.

ಇತ್ತೀಚಿನ, 1960ರ ದಶಕದವರೆಗೆ ಬಡದೇಶಗಳ ಶೈಕ್ಷಣಿಕ ನೀತಿ ನಿರೂಪಕರು ಶೈಕ್ಷಣಿಕ ಅವಕಾಶಗಳ ವಿಸ್ತರಣೆಯ ಮುಂದುವರಿಕೆಯನ್ನು ಮತ್ತು ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಶಾಲಾಕಲಿಕೆಯ ಕೊಡುಗೆಯನ್ನು ಕುರಿತು ಒಂದು ಆಶಾವಾದಿ ನಿಲುವನ್ನು ಪ್ರಕಟಪಡಿಸುತ್ತಲೇ ಇದ್ದರು. ಮುಂದುವರಿದ ಬಂಡವಾಳಶಾಹಿ ದೇಶಗಳ ಶೈಕ್ಷಣಿಕ ಇತಿಹಾಸದ ಪ್ರತಿಕೃತಿ ನಿರ್ಮಿಸುವ ಭರವಸೆಯಿಂದ ಬಹಳಷ್ಟು ಹೊಸ ರಾಷ್ಟ್ರಗಳ ಸರಕಾರಗಳು ಮಧ್ಯಮಾವಧಿ ಅಥವಾ ಅಲ್ಪಾವಧಿಯ ಉದ್ದೇಶವಾಗಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಅಳವಡಿಸಿಕೊಂಡವು. ವಿಸ್ತೃತ ಶಾಲಾಕಲಿಕೆಯು ಅಭಿವೃದ್ಧಿ ಪ್ರಕಿಯೆಯಲ್ಲಿ 'ಮಾನವ ಸಂಪನ್ಮೂಲದ ಕೊರತೆಗಳನ್ನು ಮುರಿಯುವ ಮತ್ತು ವಿಸ್ತೃತಗೊಂಡಿರುವ ಸವಲತ್ತುಗಳನ್ನು ಇಲ್ಲವಾಗಿಸುತ್ತದೆ ಎಂದು ಯೋಚಿಸಲಾಯಿತು.

ಆದರೆ 1965 ರ ಹೊತ್ತಿಗೆ ದಾಖಲಾತಿಯ ಬೆಳವಣಿಗೆ ಕುಸಿಯುತ್ತಾ ಹೋಯಿತು. ಒಟ್ಟಾರೆಯಾಗಿ ಕಮ್ಯುನಿಸ್ಟ್‌ಯೇತರ ಬಡದೇಶಗಳಲ್ಲಿ ಶಾಲಾ ದಾಖಲಾತಿಯು ಹೆಚ್ಚುತ್ತಿದ್ದ ಜನಸಂಖ್ಯೆಗೆ ತಕ್ಕಂತೆ ಏರುವಲ್ಲಿ ವಿಫಲವಾಯಿತು, ಪರಿಣಾಮವಾಗಿ ನಿರಕ್ಷರಸ್ಥರ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು[1]. ಕಳೆದ ದಶಕಗಳಲ್ಲಿ ಶಾಲಾ ಕಲಿಕೆಯ ರಚನೆಯು ಆರ್ಥಿಕ ಬೆಳವಣಿಗೆಗೆ ಅಡ್ಡಿ ಉಂಟು ಮಾಡುತ್ತಿರುವುದಷ್ಟೇ ಅಲ್ಲದೆ ಆರ್ಥಿಕ ಅಸಮಾನತೆಗೂ ಕೊಡುಗೆ ನೀಡುತ್ತಿದೆ[2] ಎನ್ನುವುದನ್ನು ಸೂಚಿಸುವ ಪುರಾವೆಗಳು ಸಿಗತೊಡಗಿದವು. ಪ್ರಪಂಚದಾದ್ಯಂತ ಶಿಕ್ಷಣ ಸಚಿವಾಲಯಗಳು ತೀವ್ರವಾದ ಹಣಕಾಸಿನ ಕೊರತೆಯಿಂದಾಗಿ, ಶಾಲಾಕಲಿಕೆಯಿಂದ ಹೊರಬಂದವರು ನಿರುದ್ಯೋಗಿಗಳಾಗಿರುವ ಪರಿಸ್ಥಿತಿಯನ್ನು ಎದುರಿಸುತ್ತಾ, ಮತ್ತು ಶಿಕ್ಷಣಕ್ಕೆ ಮುಕ್ತ ಅವಕಾಶವಿರಬೇಕೆಂಬ ನಿರಂತರ

ಬೇಡಿಕೆಯನ್ನು ಪೂರೈಸಲಾಗದೆ ಅನೌಪಚಾರಿಕ - ಗ್ರಾಮೀಣ ಪ್ರದೇಶದ, ವೃತ್ತಿಪರರ, ಸೀಮಿತವಾದ (ಬಹಳಷ್ಟು) ಪರ್ಯಾಯ ಸಾರ್ವತ್ರಿಕ ಮೂಲ ಶಿಕ್ಷಣವನ್ನು ಕೊಡುವುದರತ್ತ ಗಮನ ಹರಿಸಿವೆ[3].

ನೆಲಕಚ್ಚಿದ ಭರವಸೆಗಳು ಮತ್ತೊಮ್ಮೆ ಯೋಚಿಸುವಂತೆ ಮಾಡುತ್ತವೆ. ಖೋತಾ ಬಜೆಟ್ಟಿನ ಕಾಲವು ಈಗ ಮಸುಕಾದ ಆಶಾವಾದದ ಅಂತಾರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಯ ಪರಿಕಲ್ಪನಾತ್ಮಕ ಮೂಲಗಳನ್ನು ಮತ್ತೆ ಪರಿಶೀಲಿಸುವಂತೆ ಮಾಡುತ್ತಿದೆ. ಬಡ ಬಂಡವಾಳಶಾಹಿ ದೇಶಗಳಲ್ಲಿ ಶಾಲಾಕಲಿಕೆಯನ್ನು ಕುರಿತು ಅಧ್ಯಯನ ಮಾಡಿದ ಆರ್ಥಶಾಸ್ತ್ರಜ್ಞರು ಹಾಗೂ ಸಮಾಜ ವಿಜ್ಞಾನಿಗಳು ಶಿಕ್ಷಣ ನೀತಿಯು ಆರ್ಥಿಕ ಬೆಳವಣಿಗೆಯನ್ನು ಮತ್ತು ಇತ್ತೀಚೆಗೆ, ಆರ್ಥಿಕ ಲಾಭಗಳ ನ್ಯಾಯಯುತ ವಿತರಣೆಯನ್ನು ಸಾಧಿಸುವಲ್ಲಿ ಅತ್ಯಂತ ಪ್ರಮುಖ ಸಾಧನವಾಗಬಹುದು ಎನ್ನುವ ತಮ್ಮ ಬಲವಾದ ನಂಬಿಕೆಯನ್ನು ಶಿಕ್ಷಣ ತಜ್ಞರುಗಳೊಂದಿಗೆ ಹಂಚಿಕೊಂಡಿದ್ದಾರೆ. ಶಿಕ್ಷಣ ನೀತಿಯು ಅಸಮಾನತೆಯನ್ನು ತೊಡೆದು ಹಾಕುತ್ತದೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ ಎನ್ನುವ ಈ ನಂಬಿಕೆಯು ಎರಡು ಮೂಲಭೂತ ಪ್ರತಿಪಾದನೆಗಳನ್ನು ಆಧರಿಸಿದೆ: ಮೊದಲನೆಯದಾಗಿ, ಶಿಕ್ಷಣ ನೀತಿಯು ಆರ್ಥಿಕ ಬೆಳವಣಿಗೆಯ ಗತಿಯ ಮೇಲೆ ಮತ್ತು ಅದರ ಲಾಭಗಳ ವಿತರಣೆಯ ಮೇಲೆ ನೇರವಾಗಿ ಇಲ್ಲವೆ ಪರೋಕ್ಷವಾಗಿ ಪರಿಣಾಮವನ್ನು ಬೀರುತ್ತದೆ ಎನ್ನುವುದು; ಮತ್ತು ಎರಡನೆಯದಾಗಿ, ಶಿಕ್ಷಣ ನೀತಿಯು ಒಂದು 'ಬಹಿರ್ಮುಖ ನೀತಿಯ ಸಾಧನ' ಎಂದು ಪರಿಗಣಿಸಲು ಅದು ಸಮಾಜದಲ್ಲಿರುವ ಆರ್ಥಿಕ ಸಂಬಂಧಗಳಿಂದ ಪ್ರತ್ಯೇಕವಾಗಿರುತ್ತದೆ ಎನ್ನುವುದು.

ಶಿಕ್ಷಣ ನೀತಿಯು ಪರಿಣಾಮಕಾರಿಯೂ ಬಹಿರ್ಮುಖವೂ ಆಗಿರುತ್ತದೆ ಎಂದು ಅಂದಾಜು ಮಾಡುವುದು ಮಾನವ ಬಂಡವಾಳಶಾಹಿ ಧೋರಣೆ ಹಾಗೂ ಪ್ರಭುತ್ವದ ಉದಾರವಾದಿ ಸಿದ್ಧಾಂತಗಳೆರಡರ ಒಟ್ಟಾರೆ ಮೇಲ್ಮುಖ ಚಲನೆಯನ್ನು ಪ್ರತಿಫಲಿಸುತ್ತದೆ. ಈ ಎರಡೂ ದೃಷ್ಟಿಕೋನಗಳ ಪರಸ್ಪರ ಹತ್ತಿರದ ಸಂಬಂಧದ ಯಶಸ್ಸಿನ ಒಂದು ಪ್ರಮುಖ ಪರಿಣಾಮವೆಂದರೆ ಆರ್ಥಿಕ ಬದುಕಿನ ಶಕ್ತಿಯ ಸಂಗತಿಯನ್ನು ಕ್ರೀಡಾ ಸಿದ್ಧಾಂತದ ಅಮೂರ್ತ ಮತ್ತು ನಿಗೂಢ ಜಗತ್ತಿಗೆ (ವ್ಯಂಗ್ಯವೆಂದರೆ ಅಲ್ಲಿಯೂ ಇದನ್ನು ಸ್ವಾಗತಿಸುವರಿಲ್ಲ), ಮತ್ತು ಅದಕ್ಕಿಂತಲೂ ದೂರವಾದ ರಾಜಕೀಯ ಶಾಸ್ತ್ರಜ್ಞರುಗಳು, ಸಮಾಜಶಾಸ್ತ್ರಜ್ಞರುಗಳು ಮತ್ತು ಗಾಲ್‌ಬ್ರಯಾತ್ (ಅಪರಿಚಿತ) ವಾಸಿಸುವ ಜಗತ್ತಿಗೆ ದೂಡಿಬಿಡುತ್ತದೆ[4]. ಪ್ರತಿಯೊಬ್ಬ ಆರ್ಥಿಕ ಪಾತ್ರಧಾರಿಯೂ ಸಂಪನ್ಮೂಲವುಳ್ಳವನಾಗಿದ್ದರೆ ಅಥವಾ ಹೆಚ್ಚು ನಿರ್ದಿಷ್ಟವಾಗಿ ಹೇಳುವುದಾದರೆ ಸ್ಯಾಮ್ಯುಯಲ್‌ಸನ್ ಹೇಳಿದಂತೆ, ಬಂಡವಾಳಶಾಹಿಯು ಕೆಲಸಗಾರರನ್ನು ನೇಮಿಸಿಕೊಳ್ಳುತ್ತಾನೊ ಅಥವಾ ಅದಕ್ಕೆ ತದ್ವಿರುದ್ಧವೊ ಎನ್ನುವುದು ಇಲ್ಲಿ ಮುಖ್ಯವಲ್ಲ, ಸ್ಪರ್ಧಾತ್ಮಕ ಮಾದರಿಯಲ್ಲಿ ಅಧಿಕಾರವನ್ನು ನಾವು ಮರೆತುಬಿಡಬಹುದು[5]. ಆರ್ಥಿಕ ಪಾತ್ರಧಾರಿಗಳ ಸಂಬಂಧವನ್ನು ವ್ಯಾಖ್ಯಾನಿಸುವ ಸಾಂಸ್ಥಿಕ ರಚನೆಗಳು ಆರ್ಥಿಕ ವಿಶ್ಲೇಷಣೆಯ ಅಥವಾ ಉದಾರವಾದಿ ನೀತಿಯ ವಸ್ತುಗಳಾಗಿರುವುದಿಲ್ಲ[5].

ಸಮಾನತೆಯ ಸಾಮಾಜಿಕ ಮತ್ತು ಆರ್ಥಿಕ ನೀತಿಯು ಮೂಲಭೂತವಾಗಿ 'ಪ್ರಜಾಪ್ರಭುತ್ವದಡಿಯಲ್ಲಿ ಚುನಾಯಿತರಾದ ಅಥವಾ ಕನಿಷ್ಟ ಪಕ್ಷ ಸರಕಾರಿ 'ನಿರ್ಣಯ ತೆಗೆದುಕೊಳ್ಳುವ' ಎಲ್ಲವನ್ನೂ ಬಲ್ಲ 'ಉನ್ನತ ಹಂತ'ದಿಂದ ಹೇರಲ್ಪಟ್ಟ ಉತ್ಪಾದನಾ ಸಂಪನ್ಮೂಲಗಳ ಪುನರ್ವಿತರಣೆ ಎನ್ನುವ ಪೂರ್ವ ನಂಬಿಕೆಯು ಈ ದೃಷ್ಟಿಕೋನದ ಧೋರಣೆಯಾಗಿರುತ್ತದೆ[6]. ಶಾಲಾ ವ್ಯವಸ್ಥೆಯಿಂದ ಹೊರಬಂದ ವ್ಯಕ್ತಿಗಳಲ್ಲಿ 'ಕೌಶಲಗಳು' ಅಥವಾ ಇತರ ಸಾಮರ್ಥ್ಯಗಳು ಇರುತ್ತವೆ ಎನ್ನುವ ರೀತಿಯಲ್ಲಿ ಪ್ರಕಟಪಡಿಸಲಾಗುತ್ತದೆ. ಕೃಷಿಯಲ್ಲಿನ ಸುಧಾರಣೆಯು ಭೂ ಒಡೆತನವನ್ನು ಪುನರ್ವಿತರಿಸಿದ ಹಾಗೆ ಈ ಸಮಾನತಾ ಶೈಕ್ಷಣಿಕ ಸುಧಾರಣೆಯು ಕೌಶಲವನ್ನು ಪುನರ್ವಿತರಿಸುತ್ತದೆ ಎಂದು ಹೇಳಲಾಗುತ್ತದೆ[7].

ಆರ್ಥಿಕ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಮತ್ತು ಅದರ ಲಾಭಗಳ ಪುನರ್ವಿತರಣೆಯಲ್ಲಿ ಶಾಲಾ ಕಲಿಕೆಯ ಪ್ರಾಮುಖ್ಯತೆಯು ನಿರ್ವಿವಾದವಾದುದು ಎನಿಸುವಂತಿರುವುದು ಮಾನವ ಬಂಡವಾಳ ಚಿಂತನಾ ವಿಧಾನವು ಪ್ರತಿಪಾದಿಸುವುದಕ್ಕಿಂತ ಭಿನ್ನ ಕಾರಣಗಳಿಗಾಗಿ. ಅದೇನೆ ಇದ್ದರೂ ಬಂಡವಾಳಶಾಹಿ ಸಮಾಜಗಳ ಇತಿಹಾಸವನ್ನು ಇಣುಕಿ ನೋಡಿದರೆ ಸಾಕು ಪ್ರಭುತ್ವವು ಸ್ವತಂತ್ರವಾದದ್ದು ಮತ್ತು ಸಮಾನತೆಯನ್ನು ಎತ್ತಿ ಹಿಡಿಯುವಂತಹದು ಎನ್ನುವ ತಿಳುವಳಿಕೆಯು ಆರ್ಥಿಕ ಬೆಳವಣಿಗೆ, ಶಿಕ್ಷಣ ಹಾಗೂ ಅಸಮಾನತೆಯ ನಡುವಿನ ಸಂಬಂಧವನ್ನು ಕಂಡುಕೊಳ್ಳಲು ಬೇಕಾದ ತಳಹದಿಯನ್ನು ಒದಗಿಸುವುದಿಲ್ಲ[8]. ಹಾಗೆಯೆ ಇದು, ಬಂಡವಾಳಶಾಹಿ ಬೆಳವಣಿಗೆಯ ಸಂದರ್ಭದಲ್ಲಿ ಶೈಕ್ಷಣಿಕ ಬೆಳವಣಿಗೆಯ ಚಲನಶೀಲತೆಯ ಮೇಲೆ ಬೆಳಕನ್ನೂ ಚೆಲ್ಲುವುದಿಲ್ಲ[9].

ನಾನಿಲ್ಲಿ ಬಂಡವಾಳಶಾಹಿ ಸಮಾಜದಲ್ಲಿನ ಪ್ರಭುತ್ವ ಹಾಗೂ ಶಿಕ್ಷಣವನ್ನು ಕುರಿತು ಒಂದು ಪರ್ಯಾಯವಾದ ಮಾರ್ಗವನ್ನು ಮುಂದಿಡುತ್ತೇನೆ[10]. ಈ ವ್ಯಾಖ್ಯಾನದ ಪ್ರಕಾರ ಪ್ರಭುತ್ವವು ಸಮಾಜದಲ್ಲಿನ ಬಂಡವಾಳಶಾಹಿ ವರ್ಗ ಹಾಗೂ ಇತರ ಪ್ರಬಲ ಗುಂಪುಗಳ ನೆಲೆಗಳನ್ನು ವ್ಯಾಖ್ಯಾನಿಸುವ ಸಾಮಾಜಿಕ ಸಂಬಂಧಗಳನ್ನು ಪುನರುತ್ಪಾದಿಸಲು ಸಹಾಯ ಮಾಡುತ್ತದೆ. ಪ್ರಭುತ್ವದ ನೀತಿಗಳು ಹಾಗೂ ಪ್ರಭುತ್ವದ ರಚನೆಗಳೇ ಚಾಲ್ತಿಯಲ್ಲಿರುವ ಆರ್ಥಿಕ ರಚನೆ ಹಾಗೂ ಅದರ ವರ್ಗ ಸಂಬಂಧಗಳ ಮಿತಿಗೊಳಪಡುತ್ತವೆ. ಸಾಮಾನ್ಯವಾಗಿ ರಾಜಕೀಯವಾಗಿ ಶಕ್ತಿಯುತವಾಗಿರುವ ಗುಂಪುಗಳ ಅಧಿಕಾರವನ್ನು ಹೆಚ್ಚಿಸುವ ರೀತಿಯಲ್ಲಿ ಸ್ವತಃ ಆರ್ಥಿಕ ರಚನೆಯೇ ಪ್ರಭುತ್ವದ ಪ್ರಭಾವದಲ್ಲಿದೆ. ಉತ್ಪಾದನಾ ಪ್ರಕ್ರಿಯೆಯ ಒಳಹರಿವಾಗಿರುವ ರಾಜಕೀಯ ಬದುಕು, ಸೈದ್ಧಾಂತಿಕತೆ ಮತ್ತು ಶ್ರಮಿಕ ಶಕ್ತಿಯನ್ನು ಪ್ರಮುಖವಾಗಿ ಪ್ರಭಾವಿಸುವ ಶೈಕ್ಷಣಿಕ ವ್ಯವಸ್ಥೆಯು ಪ್ರಭುತ್ವದ ಪ್ರಮುಖ ಸಾಧನಗಳಲ್ಲೊಂದಾಗಿದೆ. ಸಾಮಾಜಿಕ ಸಂಬಂಧಗಳ ಪುರುತ್ಪಾದನೆ ಮತ್ತು ಅವುಗಳ ಮಾರ್ಪಾಡು ಶಾಲೆಯ 'ಹೊರಹರಿವು' ಆಗಿರುತ್ತದೆ; ವ್ಯಕ್ತಿಯಲ್ಲಿ ಅಡಕಗೊಳಿಸಲ್ಪಟ್ಟಿರುವ 'ಕೌಶಲ'ಗಳು ಈ ಪ್ರಕ್ರಿಯೆಯ ಒಂದಂಶವನ್ನು ಮಾತ್ರ - ಬಹಳ ಪ್ರಮುಖವಾದದ್ದೂ ಅಲ್ಲ - ಪ್ರತಿನಿಧಿಸುತ್ತವೆ. ಉತ್ಪಾದನೆಯ ಸಾಮಾಜಿಕ ಸಂಬಂಧಗಳ ಮೇಲಿನ ಶೈಕ್ಷಣಿಕ ರಚನೆಗಳ ಪರಿಣಾಮವು, ಅಂದರೆ ಶ್ರಮಿಕ ಪ್ರಕ್ರಿಯೆಯಲ್ಲಿನ ಆಸ್ತಿ ಹಾಗೂ ಅಧಿಕಾರದ ಸಂಯೋಜನೆಯು, ಶಾಲಾ ಕಲಿಕೆ ಹಾಗೂ ಆರ್ಥಿಕತೆಯ ನಡುವಿನ ನಿರ್ಣಾಯಕ ಸಂಬಂಧವನ್ನು ಪ್ರತಿನಿಧಿಸುತ್ತದೆ ಮತ್ತು ಅದೇ ಸಮಯದಲ್ಲಿ, ಬಂಡವಾಳಶಾಹಿ ಸಮಾಜದಲ್ಲಿ ಸಮಾನತೆಯ ಸುಧಾರಣೆಗಳನ್ನು ರೂಪಿಸುವಲ್ಲಿರುವ ರಾಚನಿಕ ಮಿತಿಯನ್ನು ತೋರಿಸುತ್ತದೆ.

ಶೈಕ್ಷಣಿಕ ಅಸಮಾನತೆ ಹಾಗೂ ಆದಾಯದ ಅಸಮಾನತೆಗಳೆರಡೂ ಬಂವಾಳಶಾಹಿ ಸಮಾಜಗಳ ವರ್ಗ ರಚನೆಯನ್ನು ಪ್ರತಿಬಿಂಬಿಸುತ್ತವೆ. ಅಭಿವೃದ್ಧಿ ಅಥವಾ ಸಮಾನತೆಗೆ ಶೈಕ್ಷಣಿಕ ನೀತಿಗಳ ಕೊಡುಗೆಯನ್ನು ಚಾಲ್ತಿಯಲ್ಲಿರುವ ವರ್ಗ ರಚನೆ ಮತ್ತು ಪ್ರಬಲ ವರ್ಗವು ಶಾಲಾಕಲಿಕೆಯ ಮೇಲೆ ಹೇರುವ ಪಾತ್ರವು, ಅಂದರೆ ಪ್ರಬಲ ಉತ್ಪಾದನಾ ವಿಧಾನ ವರ್ಗ ರಚನೆಯು ನಿರ್ಬಂಧಿಸುತ್ತದೆ ಎನ್ನುವ ತೀರ್ಮಾನಕ್ಕೆ ನಾನು ಬರುತ್ತೇನೆ.

ಈಗ ನಾವು ಬಂಡವಾಳಶಾಹಿ ಸಾಮಾಜಿಕ ರಚನೆಯನ್ನು ರೂಪಿಸುವಲ್ಲಿ ಶಿಕ್ಷಣದ ಸ್ಥಾನವನ್ನು ಅರ್ಥ ಮಾಡಿಕೊಳ್ಳಲು ವರ್ಗ ಸಂಬಂಧಗಳ ಚಲನಶೀಲತೆಯನ್ನು ವಿಶ್ಲೇಷಣೆಗೊಳಪಡಿಸುವ ಅಗತ್ಯವಿದೆ. ಶ್ರಮದ ಸಾಮಾಜಿಕ ಸಂಘಟನೆ ಮತ್ತು ಶಾಲೆಯ ನಡುವಿನ ಕೊಂಡಿ ಮತ್ತು ಅವೆರಡನ್ನು ಒಟ್ಟಾರೆ ಬಂಡವಾಳಶಾಹಿ ಆರ್ಥಿಕತೆಯ ಚಲನಶೀಲತೆಯನ್ನು ಗುರುತಿಸಲು ನಾನು ಸ್ಥಾನಮಾನ, ಆದಾಯ, ಅಥವಾ ಉತ್ಪಾದಿಸಿದ ವಸ್ತುಗಳ ಮಾದರಿಗಳನ್ನು ಆಧರಿಸಿದ ಸಾಮಾಜಿಕ ಮೊತ್ತಗಳ ಬದಲಿಗೆ ಮಾರ್ಕ್ಸ್‌ವಾದಿ ಪರಿಕಲ್ಪನೆಯ ವರ್ಗವನ್ನು ಉಪಯೋಗಿಸುತ್ತೇನೆ. ಎರಡು ವಿಭಿನ್ನವಾದ ವರ್ಗ ಸಂಬಂಧಗಳನ್ನು ಇಲ್ಲಿ ಮಂಡಿಸಲಾಗಿದೆ: ನಿರ್ದಿಷ್ಟ ಶ್ರಮಿಕ

ಪ್ರಕ್ರಿಯೆಯೊಳಗಿನ ಸಂಬಂಧ, ಉದಾಹರಣೆಗೆ ಬಂಡವಾಳಶಾಹಿ-ಶ್ರಮಿಕ, ಮತ್ತು ವಿಶಿಷ್ಟವಾದ ಶ್ರಮಿಕ ಪ್ರಕ್ರಿಯೆಗಳನ್ನು ವ್ಯಾಪಿಸಿದ ಸಂಬಂಧಗಳು ಉದಾಹರಣೆಗೆ ರೈತ-ಶ್ರಮಿಕ. ಮೊದಲನೆಯದರಲ್ಲಿ ಶ್ರಮಿಕ ಪ್ರಕ್ರಿಯೆಯೊಳಗೆ ನೇರವಾದ ನಿಯಂತ್ರಣ ಹಾಗೂ ಶೋಷಣೆಯ ಸಂಬಂಧಗಳನ್ನು ವ್ಯಾಖ್ಯಾನಿಸಲಾಗಿದೆ. ಪ್ರಮುಖವಾಗಿ ಮಾರುಕಟ್ಟೆಗಳ ಮೂಲಕ ಅಥವಾ ಪ್ರಭುತ್ವದ ಮೂಲಕ ವಿಶಿಷ್ಟ ಶ್ರಮಿಕ ಪ್ರಕ್ರಿಯೆಗಳನ್ನು ಒಳಗೊಳ್ಳುವ ಗುಂಪುಗಳ ಪರಸ್ಪರ ಸಂಪರ್ಕವನ್ನು ಕಲ್ಪಿಸುವ ವರ್ಗ ಸಂಬಂಧಗಳನ್ನು ಅನಿವಾರ್ಯವಾಗಿ ಅಷ್ಟೇನು ಸ್ಪಷ್ಟವಾಗಿ ಉತ್ಪಾದನಾ ರಚನೆಯಿಂದ ವ್ಯಾಖ್ಯಾನಿಸಲಾಗಿಲ್ಲ. ಬಹುವಿಧದ ವಿಶಿಷ್ಟವಾದ ಉತ್ಪಾದನಾ ವಿಧಾನಗಳಿಂದ ಕೂಡಿದ ಎಲ್ಲೆಡೆಗೂ ಮುಕ್ತವಾಗಿರುವ ಸಾಮಾಜಿಕ ರಚನೆಯಲ್ಲಿನ ವರ್ಗ ಸಂಬಂಧಗಳನ್ನು ಹಿಡಿದಿಡಲು ವರ್ಗಗಳಲ್ಲಿನ ಸಮ್ಮಿಶ್ರ ರಚನೆಯ ಸಮಸ್ಯೆಯನ್ನು ನಾನು ಪರಿಗಣಿಸುತ್ತೇನೆ.

ಅತ್ಯಂತ ಅಮೂರ್ತವಾದ ಬಂಡವಾಳಶಾಹಿ ಸಮಾಜದ ಎರಡು ವರ್ಗಗಳ ಮಾದರಿಯ ತಿರಸ್ಕರಿಸುವಿಕೆ ಮತ್ತು ವರ್ಗ ಹೊಂದಾಣಿಕೆಯ ಪರಿಕಲ್ಪನೆಯು ಸೃಷ್ಟಿಸಿರುವ ಅಸ್ಥಿರತೆಯನ್ನು ಗುರುತಿಸುವುದು ಸಾಮಾಜಿಕ ಬದಲಾವಣೆಯ ರಾಜಕೀಯ ಹಾಗೂ ಸೈದ್ಧಾಂತಿಕ ಅಂಶಗಳ ಪ್ರಾಮುಖ್ಯತೆಯು ಹೆಚ್ಚಾಗುತ್ತಿರುವುದನ್ನು ಸೂಚಿಸುತ್ತದೆ. ಅಷ್ಟೇ ಮುಖ್ಯವಾಗಿರುವುದೆಂದರೆ ಬಹುವರ್ಗದ ಒಂದು ವಿಶ್ಲೇಷಣೆಯ ಪ್ರಭುತ್ವವು 'ಎಲ್ಲ ಬೂರ್ಜ್ವಾ ವರ್ಗದ ಸಾಮಾನ್ಯ ಆಗುಹೋಗುಗಳನ್ನು ನಿರ್ವಹಿಸುವ ಸಮಿತಿ' ಎನ್ನುವುದನ್ನು ಪುನರ್ಪರಿಶೀಲನೆ ಮಾಡಲು ಆಹ್ವಾನಿಸುತ್ತದೆ[11]. ಇಲ್ಲಿ ಮಂಡಿಸಲಾಗಿರುವ ಸೂತ್ರದಂತೆ ಪ್ರಭುತ್ವವು ವರ್ಗಗಳ ಹೊಂದಾಣಿಕೆಗಳು ರೂಪುಗೊಳ್ಳುವ ಮತ್ತು ಯಾವುದೇ ಒಂದು ವರ್ಗವು ಪ್ರಭುತ್ವವನ್ನು ತನ್ನ ಸಾಧನವನ್ನಾಗಿ ಮಾಡಿಕೊಳ್ಳಲಾಗದ ಒಂದು ಅಖಾಡವಾಗಿದೆ. ಬಹುಮುಖಿ ವರ್ಗ ಸಂಬಂಧಗಳು, ಪ್ರಭುತ್ವದ ನೀತಿಯ ಮೇಲಿನ ರಾಚನಿಕ ಮಿತಿ ಮತ್ತು ಇದಕ್ಕೆ ಹೊಂದಿಕೊಂಡಂತಿರುವ ವರ್ಗ ಶಕ್ತಿಯ ಸಮಸ್ಯಾತ್ಮಕ ಸ್ವರೂಪಗಳು ನಮಗೆ ಒಂದು ನಿರ್ದಿಷ್ಟ ಪ್ರಭುತ್ವದ ನೀತಿಯು ಯಾವುದೇ ಒಂದು ವರ್ಗದ ಹಿತಾಸಕ್ತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಊಹಿಸಲು ಸಾಧ್ಯವಿಲ್ಲ ಎನ್ನುವುದನ್ನು ನೆನಪಿಸುತ್ತದೆ.

ಇನ್ನೂ ಏನಾದರೂ ಅನುಮಾನ ಉಳಿದಿದ್ದರೆ ಸ್ಪಷ್ಟಪಡಿಸುತ್ತೇನೆ, ಆನಂತರದ ಅಸಮರ್ಪಕ ಸಮೀಕರಣ ಮತ್ತು ಹಿಂಬಾಕಿ ಅಂದಾಜಿನ ಪ್ರಮಾಣವನ್ನು ಹೊರತುಪಡಿಸಿದರೆ ಈ ಪ್ರಬಂಧವು ಮೂಲಭೂತವಾಗಿ ಸೈದ್ಧಾಂತಿಕವಾದುದಾಗಿದೆ ಎಂದು ನಾನು ಖಾತ್ರಿಪಡಿಸುತ್ತೇನೆ. ನನ್ನ ಉದ್ದೇಶ ಮೂಲಭೂತವಾದ ಚಲನಶೀಲ ರಾಚನಿಕ ಸಂಬಂಧಗಳನ್ನು ಗುರುತಿಸುವುದಾಗಿದೆ. ಒಂದು ವೇಳೆ ನಾನು ಯಶಸ್ವಿಯಾದರೆ ಅದು ನಿರ್ದಿಷ್ಟವಾದ ಸಾಮಾಜಿಕ ರಚನೆಯ ವಾಸ್ತವಿಕ ವಿಶ್ಲೇಷಣೆಯ ಆರಂಭಿಕ ಹೆಜ್ಜೆಯಾಗುತ್ತದೆ. ಯಾವುದೇ ವಾಸ್ತವಿಕ ಅಳವಡಿಕೆಯಲ್ಲಿ ವರ್ಗದ ಗಡಿ ಮತ್ತು ಉತ್ಪಾದನಾ ವಿಧಾನಗಳ ವ್ಯಾಖ್ಯಾನ, ಸಮಸ್ಯೆಯ ಅಂತಾರಾಷ್ಟ್ರೀಯ ಅಂಶಗಳು ಮತ್ತು ಪ್ರಭುತ್ವವನ್ನು ಸಂಪೂರ್ಣವಾಗಿ ಮತ್ತು ಸರಳವಾಗಿ (ಅಥವಾ ಸಂಕೀರ್ಣವಾಗಿಯೂ ಕೂಡ) ವರ್ಗ ಸಂಬಂಧಗಳ ಅಭಿವ್ಯಕ್ತಿ ಎನ್ನುವ ಮಟ್ಟಕ್ಕೆ ತರಲಾಗುವುದಿಲ್ಲ ಎನ್ನುವ ವಾಸ್ತವಿಕತೆಯ ಸೂಕ್ಷ್ಮವಾದ ಗಮನಿಸುವಿಕೆಯನ್ನು ಬೇಡುತ್ತದೆ.

## 1. ವಿತರಣಾ ಸಂಘರ್ಷದ ಚಲನಶೀಲತೆ

ಬಂಡವಾಳಶಾಹಿ ಬೆಳವಣಿಗೆಯ ಪ್ರಕ್ರಿಯೆಯ ಪ್ರಮುಖ ಲಕ್ಷಣಗಳನ್ನು ಬಂಡವಾಳಶಾಹಿ ಹಾಗೂ ಸಾಂಪ್ರದಾಯಿಕ ಉತ್ಪಾದನಾ ವಿಧಾನ ಮತ್ತು ಅವುಗಳ ಪರಸ್ಪರ ಕೊಡುಕೊಳ್ಳುವಿಕೆಯ ಆಂತರಿಕ ಸಂಘಟನೆಯ ಮೇಲೆ ಗಮನಹರಿಸುವ ಸರಳವಾದ ವಿಶ್ಲೇಷಣೆಯಿಂದ ಹಿಡಿದಿಡಬಹುದು. ವಿಭಿನ್ನ ಉತ್ಪಾದನಾ ವಿಧಾನಗಳ ಆರ್ಥಿಕತೆಯು ವಾಸ್ತವದಲ್ಲಿ ಉತ್ಪಾದಿಸಿದ ವಸ್ತುಗಳಲ್ಲಿ, ಉಪಯೋಗಿಸುವ ತಾಂತ್ರಿಕತೆಯಲ್ಲಿ ಮತ್ತು ಇತರ ಸಂಗತಿಗಳಗೆ ಸಂಬಂಧಿಸಿದಂತೆ ವ್ಯತ್ಯಾಸಗಳಿರಬಹುದು ಆದರೆ, ಒಂದು ಆರ್ಥಿಕ ಚಟುವಟಿಕೆಯನ್ನು ವಿಶಿಷ್ಟ ವಿಧಾನವನ್ನಾಗಿ ಮಾಡುವುದು ಉತ್ಪಾದನೆಯ ಸಾಮಾಜಿಕ ಸಂಬಂಧವಾಗಿದೆ. ಹಾಗಾಗಿ, ಬಂಡವಾಳಶಾಹಿ ಉತ್ಪಾದನಾ ವಿಧಾನವು ತಾಂತ್ರಿಕ ಚಲನಶೀಲತೆಯನ್ನು ಮತ್ತು ತೀವ್ರಗತಿಯ ವಿಸ್ತರಣೆಯನ್ನು ಪ್ರಕಟಪಡಿಸುತ್ತದೆ. ಆದರೆ ಅದನ್ನು ಒಂದು ಉತ್ಪಾದನಾ ವಿಧಾನವನ್ನಾಗಿ ತೋರಿಸುವುದು ಮಾತ್ರ ಅದರ ಸಾಮಾಜಿಕ ಸಂಘಟನೆ; ಬಹುಸಂಖ್ಯಾತ ಉತ್ಪಾದಕರು ಅವರ ಜೀವನೋಪಾಯಕ್ಕೆ ಅಗತ್ಯವಾದದ್ದನ್ನು ಹೊಂದಿರುವುದಿಲ್ಲ. ಆದ್ದರಿಂದ ಅವರು ಮಾರಾಟ ಮಾಡುವುದು ಅವರ ಉತ್ಪನ್ನಗಳನ್ನಲ್ಲ ಬದಲಿಗೆ ಕೂಲಿಗಾಗಿ ಅವರ ಶ್ರಮದ ಸಮಯವನ್ನು ಮಾರಾಟ ಮಾಡುತ್ತಾರೆ. ಕೂಲಿಗಾಗಿ ಶ್ರಮಿಸುವ ಈ ಗುಂಪಿಗೆ ಅವರ ಶ್ರಮದ ಪರಿಣಾಮವಾದ ಉತ್ಪಾದನೆಯ ಮೇಲೆ ಯಾವುದೆ ಹಿಡಿತವಿರುವುದಿಲ್ಲ; ಹಾಗೆಯೆ ಯಾವ ವಸ್ತುಗಳನ್ನು ಉತ್ಪಾದಿಸಬೇಕು, ಎಂತಹ ತಾಂತ್ರಿಕತೆಯನ್ನು ಬಳಸಬೇಕು ಅಥವಾ ಕೆಲಸವನ್ನು ಹೇಗೆ ಸಂಘಟಿಸಬೇಕು ಎನ್ನುವ ಆಯ್ಕೆಯ ಮೇಲೂ ಕೂಡ ಅವರಿಗೆ ಯಾವುದೇ ನೇರ ನಿಯಂತ್ರಣವಿರುವುದಿಲ್ಲ. ಕಾರ್ಖಾನೆ, ಬೃಹತ್ ವ್ಯಾಪಾರಿ ಮಳಿಗೆ, ಅಥವಾ ಆಧುನಿಕ ವಾಣಿಜ್ಯ ಬೆಳೆ ಇವುಗಳು ಬಂಡವಾಳಶಾಹಿ ಉತ್ಪಾದನಾ ವಿಧಾನದ ಸಾಮಾನ್ಯವಾದ ಉತ್ಪಾದನಾ ಘಟಕಗಳಾಗಿರುತ್ತವೆ[12].

ಇದಕ್ಕೆ ವ್ಯತಿರಿಕ್ತವಾಗಿ ಕೂಲಿ ಶ್ರಮವು ಅಷ್ಟೇನೂ ಪ್ರಾಮುಖ್ಯವಲ್ಲದ ಸಾಂಪ್ರದಾಯಿಕ ಉತ್ಪಾದನಾ ವಿಧಾನದ ಲಕ್ಷಣವಾಗಿರುತ್ತದೆ. (ಸಾಂಪ್ರದಾಯಿಕ ಉತ್ಪಾದನಾ ವಿಧಾನ ಎನ್ನುವುದನ್ನು ಇಲ್ಲಿ ಬಂಡವಾಳೇತರ ವಿಧಾನಗಳಿಗೆ ಸಾಮಾನ್ಯ ಅಭಿವ್ಯಕ್ತಿಯಾಗಿ ಬಳಸಲಾಗಿದೆ. ನಮ್ಮ ಸದ್ಯದ ಉದ್ದೇಶಕ್ಕಾಗಿ ಅದರ ನಿಖರವಾದ ವಿವರಣೆಯನ್ನು ಇಲ್ಲಿ ಕೈಬಿಡಲಾಗಿದೆ[13].) ಸಾಂಪ್ರದಾಯಿಕ ಉತ್ಪಾದನಾ ವಿಧಾನವು ವಿಶ್ವ ಮಾರುಕಟ್ಟೆಗಾಗಿ ವಾಣಿಜ್ಯ ಬೆಳೆಯನ್ನು ಉತ್ಪಾದಿಸಬಹುದು. ಅದು ಜೀವನಾಧಾರ ಬೆಳೆಗಳು ಅಥವಾ ಕರುಕುಶಲ ವಸ್ತುಗಳನ್ನು ಉತ್ಪಾದಿಸಬಹುದು. ಉತ್ಪಾದನೆಯ ಸಾಮಾಜಿಕ ಸಂಬಂಧಗಳು ವ್ಯತ್ಯಯವಾಗಬಹುದಾದರೂ ಕೌಟುಂಬಿಕ ಕೃಷಿ, ಸಾಮುದಾಯಿಕ ಉತ್ಪಾದನೆ ಅಥವಾ ಕರಕುಶಲವಸ್ತುಗಳು ಮಾದರಿ ಉತ್ಪನ್ನ ಘಟಕಗಳಾಗಿರುತ್ತವೆ. ಈ ವಿಧಾನದಲ್ಲಿ, ನೇರವಾದ ಉತ್ಪಾದಕರು ಉತ್ಪಾದನಾ ಸಾಧನಗಳ ಮೇಲಿನ ಒಡೆತನವನ್ನು ಹೊಂದಿರುತ್ತಾರೆ ಅಥವಾ ಉತ್ಪನ್ನಗಳ ಮೇಲೆ ಮಹತ್ತಾದ ನಿಯಂತ್ರಣ ಹೊಂದಿರುತ್ತಾರೆ. ಇದರ ಜೊತೆಗೆ, ಕೆಲಸ ಮಾಡುವ ವಿಧಾನಗಳು ಮತ್ತು ಸಮಯವನ್ನು ಕುರಿತು ಸಾಕಷ್ಟು ವಿವೇಚನೆಯನ್ನು ಹೊಂದಿರುತ್ತಾರೆ ಮತ್ತು ಬಹುತೇಕ ಸಂದರ್ಭದಲ್ಲಿ ಅವರ ಶ್ರಮದ ಉತ್ಪಾದನೆಯ ಮೇಲೆ ದೊಡ್ಡ ಮಟ್ಟದ ಒಡೆತನವನ್ನು ಹೊಂದಿರುತ್ತಾರೆ. ಸಾಂಪ್ರದಾಯಿಕ ವಿಧಾನದಲ್ಲಿ ಆಸ್ತಿ ಒಡೆತನವು ಶೋಷಕ ವರ್ಗಕ್ಕೆ ಮತ್ತು ಬಹಳಷ್ಟು ಬಾರಿ ಉತ್ಪಾದನೆಯ ಮೇಲೆ ಸ್ವಲ್ಪ ಮಟ್ಟಿನ ಅಥವಾ ಯಾವುದೇ ನೇರ ಪಾತ್ರವನ್ನು ಹೊಂದಿರದ ಆದರೆ ಪಾಲು/ಗುತ್ತಿಗೆ ಅಥವಾ ಗೇಣಿ ಪದ್ದತಿಯ ಮೂಲಕ ಅಲ್ಪ ಮಟ್ಟಿನ ಕೃಷಿ ಹೆಚ್ಚುವರಿ ಉತ್ಪಾದನೆಯನ್ನು ಕಿತ್ತುಕೊಳ್ಳುವ ಭೂಮಾಲೀಕರುಗಳಿಗೆ ಬೆಂಬಲವನ್ನು ನೀಡುತ್ತದೆ. ಭೂಮಾಲೀಕ ವರ್ಗಗಳು ಇರುವೆಡೆಯೆಲ್ಲೆಲ್ಲಾ ಈ ಗುಂಪು ಅಥವಾ ಅದರ ಒಂದು ಭಾಗವನ್ನು ಸಾಂಪ್ರದಾಯಿಕ ಗಣ್ಯ ವರ್ಗ ಎಂದು ನಾನು ಕರೆಯಲಿಚ್ಛಿಸುತ್ತೇನೆ. ಇದು ಇತರರೊಡನೆ, ಸೈನ್ಯ, ಬುಡಕಟ್ಟು ಮುಖಂಡರುಗಳು ಅಥವಾ ಪ್ರತಿಷ್ಠಾಪಿತ ಧರ್ಮಗಳ ಗಣ್ಯರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬಹುದು. ಸರಳವಾಗಿ ಹೇಳುವುದಾದರೆ ನಾನು,

ಸಾಂಪ್ರದಾಯಿಕ ವಿಧಾನದಲ್ಲಿ ನೇರವಾದ ಉತ್ಪಾದಕರನ್ನು ರೈತರು ಎಂದು ಮತ್ತು ಶೋಷಕ ವರ್ಗವನ್ನು ಭೂ ಮಾಲೀಕರು ಎಂದು ಕರೆಯುತ್ತೇನೆ. ನಂತರದ ವಿಶ್ಲೇಷಣೆಯನ್ನು ಭೂ ಮಾಲೀಕತ್ವವನ್ನು ಹೊಂದಿರುವ ಸ್ವತಂತ್ರ ರೈತವರ್ಗ, ಅಥವಾ ಸ್ವತಂತ್ರವಾದ ಕೃಷಿಯೇತರ ನಗಣ್ಯ ವಸ್ತುಗಳ ಉತ್ಪಾದಕರುಗಳನ್ನು ಒಳಗೊಳ್ಳುವ ರೀತಿಯಲ್ಲಿ ಮಾರ್ಪಡಿಸಬಹುದು.

ಆಧುನಿಕ ಆರೋಗ್ಯ ತಂತ್ರಜ್ಞಾನದ ಪ್ರಭಾವದಡಿಯಲ್ಲಿ ಮತ್ತು ದೊಡ್ಡ ಕುಟುಂಬಗಳಿಗೆ ಪ್ರೋತ್ಸಾಹವನ್ನು ನಗಣ್ಯಗೊಳಿಸುವ ಪುನರ್ವಿತರಣೆ ಹಾಗೂ ಪರಸ್ಪರ ಬೆಂಬಲ ನೀಡುವ ಪರಿಣಾಮಕಾರಿ ಪ್ರಭುತ್ವದ ಗೈರುಹಾಜರಿ, ಈ ಎರಡೂ ವಿಧಾನಗಳಲ್ಲೂ ಜನಸಂಖ್ಯೆಯ ಹೆಚ್ಚಳದ ಪ್ರಮಾಣ ಜಾಸ್ತಿಯಾಗುವ ಸಾಧ್ಯತೆ ಇದೆ, ಕನಿಷ್ಟ ಪಕ್ಷ ಬಂಡವಾಳಶಾಹಿ ಅಭಿವೃದ್ಧಿಯ ಆರಂಬಿಕ ಹಂತಗಳಲ್ಲಿಯಾದರೂ ಇದು ನಿಜ[14].

ಬಂಡವಾಳಶಾಹಿ ಉತ್ಪಾದನಾ ವಿಧಾನದ ವಿಸ್ತರಣೆಯು - ಕ್ರೂಢೀಕರಣ ಪ್ರಕ್ರಿಯೆಯು - ಸಾಂಪ್ರದಾಯಿಕ ಉತ್ಪಾದನಾ ವಿಧಾನದ ಕೂಲಿ ಕಾರ್ಮಿಕರ ನೇಮಕಾತಿಯೊಂದಿಗೆ ಸಾಗುತ್ತದೆ. ಬಂಡವಾಳಶಾಹಿ ವಿಧಾನಕ್ಕೆ ಹೊಸ ಕೆಲಸಗಾರರನ್ನು ಒಳಗೊಳ್ಳುವುದು, ಬಂಡವಾಳಶಾಹಿ ಉತ್ಪಾದನೆಯು, ತಂತ್ರಜ್ಞಾನದ ಚಲನಶೀಲತೆ ಮತ್ತು ವರ್ಗ ಸಂಬಂಧಗಳು ಶಿಕ್ಷಣದ ವಿಸ್ತರಣೆಗೆ ಹಾಗೂ ಶಾಲಾ ವ್ಯವಸ್ಥೆಯ ರಚನೆಯ ವಿಕಾಸಕ್ಕೆ ಅಗತ್ಯವಾದ ಉತ್ತೇಜನವನ್ನು ಒದಗಿಸುತ್ತದೆ. ಅದಕ್ಕೆ ಹೊಂದಿಕೊಂಡಿರುವಂತಹ ಕ್ರೂಢೀಕರಣದ ಪ್ರಕ್ರಿಯೆ ಮತ್ತು ಇದರ ಪರಿಣಾಮವಾದ ಒಟ್ಟಾರೆ ಸಾಮಾಜಿಕ ರಚನೆಯ ಅಸಮಾನ ಅಭಿವೃದ್ಧಿಯು - ಬಂಡವಾಳಶಾಹಿ ವಿಧಾನದ ಚಲನಶೀಲತೆ ಮತ್ತು ಸಾಂಪ್ರದಾಯಿಕತೆಯ ಸ್ಥಗಿತತೆಗೆ ಪ್ರತಿಯಾಗಿ - ಆರ್ಥಿಕ ಅಸಮಾನತೆಯನ್ನು ಹುಟ್ಟುಹಾಕುವ ಮತ್ತು ಸಮಾನತಾ ಶೈಕ್ಷಣಿಕ ಸುಧಾರಣೆಗೆ ಮಿತಿಯೊನ್ನೊಡ್ಡುವ ಪ್ರಮುಖ ಶಕ್ತಿಗಳಾಗಿರುತ್ತವೆ. ಹಾಗಾಗಿ, ಕ್ರೂಢೀಕರಣ ಪ್ರಕ್ರಿಯೆ, ಶಿಕ್ಷಣ ಮತ್ತು ಆರ್ಥಿಕ ಅಸಮಾನತೆಯ ಸಂಬಂಧಗಳನ್ನು ವಿವರಿಸುವ ಕೆಲಸವನ್ನು ನಾನಿಲ್ಲಿ ಮಾಡುತ್ತೇನೆ.

ನಾನು, ಈ ಸಂಕೀರ್ಣ ಸಂಬಂಧವನ್ನು ಕಂಡುಕೊಳ್ಳಲು ಎರಡು ಉತ್ಪಾದನಾ ವಿಧಾನಗಳ ನಡುವಿನ ಸಂಬಂಧದ ಸರಳವಾದ ಒಂದು ವ್ಯಾಖ್ಯಾನವನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. ಅತ್ಯಂತ ಮಹತ್ವದ್ದಾದ ಸರಳೀಕೃತ ಊಹೆಗಳು ಬಂಡವಾಳಶಾಹಿ ಜಾಗತಿಕ ವ್ಯವಸ್ಥೆಯ ಪರಿಧಿಯಲ್ಲಿರುವ ಬಹಳಷ್ಟು ಸಾಮಾಜಿಕ ರಚನೆಗಳ ಮುಕ್ತ ಅಂತಾರಾಷ್ಟ್ರೀಯ ಪರಿಸರಗಳಿಂದ ಪ್ರಚೋದಿತವಾಗಿವೆ. ಸಮಗ್ರೀಕರಣಗೊಂಡ ಬೇಡಿಕೆಗಳ ಸಮಸ್ಯೆಗಳನ್ನು ನಾನು ಅಮೂರ್ತಗೊಳಿಸಿಕೊಳ್ಳುತ್ತೇನೆ ಮತ್ತು ಸರಕುಗಳ ಸಾಪೇಕ್ಷ ಬೆಲೆಗಳು ಬಾಹ್ಯವಾಗಿ ನಿರ್ಧರಿಸಲ್ಪಡುತ್ತವೆ ಎಂದು ಊಹಿಸಿಕೊಳ್ಳುತ್ತೇನೆ[15]. ಸಾರಿಗೆ ವೆಚ್ಚ, ತೆರಿಗೆಗಳು ಮತ್ತು ಇತರ ಪ್ರಭುತ್ವದ ನೀತಿಗಳ ಮೂಲಕ ಬಾಹ್ಯ ಬೆಲೆಗಳಲ್ಲಿನ ಮಾರ್ಪಾಡುಗಳು ಈ ಮಾದರಿಯಲ್ಲಿ ಯಾವ ಸಮಸ್ಯೆಯನ್ನೂ ಉಂಟುಮಾಡುವುದಿಲ್ಲ. ಆದರೆ ಇಲ್ಲಿನ ಸದ್ಯದ ಉದ್ದೇಶಕ್ಕೆ ಅಂತಹ ವಿಸ್ತರಣೆ ಅನಗತ್ಯವಾದ ಗೊಂದಲವನ್ನು ಸೃಷ್ಟಿಸುತ್ತದೆ.

ಒಟ್ಟಾರೆ ಸಾಮಾಜಿಕ ರಚನೆಯ ಆರ್ಥಿಕ ಅಸಮಾನತೆಯ ಪ್ರಮಾಣವು ಮೂರು ಅಡಕಾಂಶಗಳಿಂದ ಪ್ರತಿನಿಧಿಸಲ್ಪಡಬಹುದು: ಸಾಂಪ್ರದಾಯಿಕ ಮತ್ತು ಬಂಡವಾಳಶಾಹಿ ಉತ್ಪಾದನಾ ವಿಧಾನಗಳಲ್ಲಿರುವ ಅಸಮಾನತೆಯ ಪ್ರಮಾಣ ಮತ್ತು ಅವೆರಡು ವಿಧಾನಗಳ ನಡುವಿನಲ್ಲಿರುವ ಅಸಮಾನತೆಯ ಪ್ರಮಾಣ[16], ಇವುಗಳಲ್ಲಿನ ಪ್ರತಿಯೊಂದನ್ನೂ ನಾವು ಪರಿಗಣಿಸಲಿದ್ದೇವೆ.

ನೇರ ಉತ್ಪಾದಕರ ಅನುಭೋಗ ಮತ್ತು ಭೂಮಾಲೀಕರಿಗೆ ಕೊಡುವ  ಗೇಣಿಯ ಪಾಲುಗಳ ನಡುವಿನ ಸಾಂಪ್ರದಾಯಿಕ ವಿಧಾನದ ಒಟ್ಟು ಉತ್ಪತ್ತಿಯ ವಿಂಗಡಣೆಯನ್ನು ಎರಡೂ ವರ್ಗಗಳ ನಡುವಿನ ಸಂಘರ್ಷದ ಇತಿಹಾಸದಿಂದ ನಿರ್ಧರಿತವಾಗುವ ಗೇಣಿಯ  ಸ್ವಲ್ಪ ಭಾಗ ಪ್ರತಿನಿಧಿಸುತ್ತದೆ. ಸಾಂಪ್ರದಾಯಿಕ ವಿಧಾನದಲ್ಲಿನ ಅಗತ್ಯವಾದ ಜೀವನಾಧಾರದ ಮೇಲಿನ ಅಲ್ಪ ಪ್ರಮಾಣದ ಹೆಚ್ಚುವರಿಯು ಆರ್ಥಿಕ ಲಾಭದಲ್ಲಿನ ಅಸಮಾನತೆಯ ಪ್ರಮಾಣಕ್ಕೆ ಸಾಪೇಕ್ಷವಾದ, ವಿಶೇಷವಾಗಿ ಸಾಂಪ್ರದಾಯಿಕ ವಿಧಾನಕ್ಕೆ ಹೋಲಿಸಿದಾಗ ಕೆಳಹಂತದ ಮಿತಿಯನ್ನು ಹೇರುತ್ತದೆ[17]. ಬಂಡವಾಳಶಾಹಿ ವಿಧಾನದಲ್ಲಿ ಬಂಡವಾಳ ಮತ್ತು ಶ್ರಮದ ನಡುವಿನ ಉತ್ಪತ್ತಿಯ ವಿಂಗಡಣೆಯು ಶ್ರಮಿಕರು ಹಾಗೂ ಬಂಡವಾಳಶಾಹಿಗಳ ಸಾಪೇಕ್ಷ ಚೌಕಾಶಿ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಪ್ರತಿಯಾಗಿ ಇದು ಎರಡೂ ಉತ್ಪಾದನಾ ವಿಧಾನಗಳ ಆರ್ಥಿಕ ಪರಿಸ್ಥಿತಿಯನ್ನು ಮತ್ತು ಒಟ್ಟಾರೆ ಸಾಮಾಜಿಕ ರಚನೆಯಲ್ಲಿನ ರಾಜಕೀಯ ಮತ್ತು ಐಡಿಯಾಲಜಿಯ ಪರಿಸ್ಥಿತಿಗಳನ್ನು ಅವಲಂಬಿಸಿರುತ್ತದೆ. ನಾನಿಲ್ಲಿ ಆರ್ಥಿಕ ಅಂಶಗಳ ಮೇಲೆ ಗಮನ ಕೇಂದ್ರೀಕರಿಸುತ್ತೇನೆ. ಸಾಂಪ್ರದಾಯಿಕ ವಿಧಾನದಲ್ಲಿ  ನೇರ ಉತ್ಪಾದಕರ ಆದಾಯವನ್ನೂ ಮೀರಿ ಬಂಡವಾಳಶಾಹಿ ವಿಧಾನದಲ್ಲಿ ಕೂಲಿ ಇರುವವರೆಗೆ ಕೂಲಿ ಕೆಲಸಗಾರರು ದುರ್ಬಲರಾಗಿರುತ್ತಾರೆ. ಚಾಲ್ತಿಯಲ್ಲಿರುವ ಕೂಲಿಗೆ ಕೆಲಸ ಮಾಡಲು ಇಷ್ಟವಿಲ್ಲದವರ ಬದಲಿಗೆ ನೇಮಕ ಮಾಡಿಕೊಳ್ಳಲು ಇರುವ ಸಾಂಪ್ರದಾಯಿಕ ವಿಧಾನದಲ್ಲಿನ ಸಂಭಾವ್ಯ ಕೂಲಿ ಶ್ರಮಿಕರ 'ಮೀಸಲು ಪಡೆ' ಅವರ ಈ ದುರ್ಬಲತೆಗೆ ಕಾರಣವಾಗಿರುತ್ತದೆ. ಹಾಗಾಗಿ ಬಂಡವಾಳಶಾಹಿ ವಿಧಾನದಲ್ಲಿನ ಆದಾಯ ಪ್ರಮಾಣದ ವಿತರಣೆಯು ಉತ್ಪತ್ತಿ ಮೇಲಿನ ಒಡೆತನ ಮತ್ತು ಸಂಪತ್ತಿನ ಕೇಂದ್ರೀಕರಣ ಪ್ರಮಾಣದ ಮೇಲಿನ ಹೋರಾಟದ ಪರಿಣಾಮವನ್ನು ಅವಲಂಬಿಸಿರುತ್ತದೆ.

ಸಂಪೂರ್ಣ ಸಮಾಜದ, ವರ್ಗ ಆದಾಯದ ವಿತರಣೆಯು ಈ ಕೆಳಗಿನ ಬದಲಾವಣೆಗೆ ಅನುಸಾರವಾಗಿ ಖಂಡಿತ ಬದಲಾಗುತ್ತದೆ: ಎರಡು ವಿಧಾನಗಳ ನಡುವಿನ ಶ್ರಮದ ವಿತರಣೆ ಹಾಗೂ ಆ ವಿಧಾನಗಳ ತುಲನಾತ್ಮಕ ಉತ್ಪಾದನಾ ಸಾಮರ್ಥ್ಯ, ಬಂಡವಾಳ  ಹಾಗೂ ಶ್ರಮದ ಚೌಕಾಶಿ ಸಾಮರ್ಥ್ಯ ಮತ್ತು ಗೇಣಿಯ ಪಾಲುದಾರಿಕೆ. ಬಂಡವಾಳಶಾಹಿ ವಿಧಾನದ ತಾಂತ್ರಿಕ ಚಲನಶೀಲತೆ ಮತ್ತು ಕೂಲಿಯ ಮೇಲೆ ಕಾಯ್ದಿರಿಸಿದ ಸೈನ್ಯವು ವಿಧಿಸುವ ಮಿತಿಯೊಂದಿಗೆ ಉತ್ಪಾದಿಸಿದ್ದನ್ನು ಮರುಹೂಡಿಕೆ ಮಾಡುವ ಉನ್ನತ ಸಾಮರ್ಥ್ಯವು ಬಂಡವಾಳಶಾಹಿ ವಿಧಾನ ಮತ್ತು ಬಂಡವಾಳಶಾಹಿ ವಿಧಾನ  ಹಾಗೂ ಸಾಂಪ್ರದಾಯಿಕ ವಿಧಾನಗಳ ನಡುವಿನ ಅಸಮಾನತೆಯನ್ನು ಹೆಚ್ಚಿಸುವ ಪ್ರವೃತ್ತಿಯನ್ನು ಹೊಂದಿದೆ. ಇದು ಬಂಡವಾಳಶಾಹಿ ಅಭಿವೃದ್ಧಿಯ ಲಕ್ಷಣವಾಗಿರುವ, ನಿರ್ದಿಷ್ಟವಾಗಿ ಆರಂಭಿಕ ಹಂತಗಳಲ್ಲಿ ಅಸಮತೋಲನ ಅಭಿವೃದ್ಧಿಯಾಗಿದೆ[18].

ಈಗ ವಿತರಣಾ ಪ್ರಕ್ರಿಯೆಯಲ್ಲಿರುವ ಪ್ರತಿ ವರ್ಗದ ಹಿತಾಸಕ್ತಿಗಳನ್ನು ಪರಿಗಣಿಸಿ. ಶ್ರಮದ ಕೊರತೆಯನ್ನು ಉತ್ತೇಜಿಸುವುದು ಮತ್ತು ಆ ಮೂಲಕ ಅವರ ಚೌಕಾಶಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು ಕೆಲಸಗಾರರ ತತ್‌ಕ್ಷಣದ ಹಿತಾಸಕ್ತಿಯಾಗಿರುತ್ತದೆ.  ಯಾವುದೇ ಶ್ರಮ ಉಳಿತಾಯದ ಆವಿಷ್ಕಾರಗಳನ್ನು ಮಾಡದಂತೆ ಪ್ರತಿಭಟಿಸುವ ಮೂಲಕ ಮತ್ತು ಈಗಾಗಲೆ ಬಂಡವಾಳಶಾಹಿ ವಿಧಾನದಲ್ಲಿ ನೇಮಕಗೊಂಡವರ ಬದಲಿಗೆ ಸಾಂಪ್ರದಾಯಿಕ ವಿಧಾನದಿಂದ ಬಂದವರನ್ನು ಹೊಸತಾಗಿ ನೇಮಕ ಮಾಡಿಕೊಳ್ಳುವ ಬಂಡವಾಳಶಾಹಿಗಳ ಸಾಮರ್ಥ್ಯವನ್ನು ಮಿತಿಗೊಳಿಸುವ ಹಾಗೆ ನೇಮಕಾತಿ ನಿರ್ಬಂಧಗಳನ್ನು ಹೇರುವ ಮೂಲಕ ಹೀಗೆ ಮಾಡಬಹುದಾಗಿದೆ. ಸಾಂಪ್ರದಾಯಿಕ ವಲಯದ ಉತ್ಪಾದನೆಯ ಹೆಚ್ಚಳದಿಂದ ಮತ್ತು ಭೂಮಾಲೀಕರ ಗೇಣಿ ಹಂಚಿಕೆಯನ್ನು ಕಡಿತಗೊಳಿಸುವ ಮೂಲಕ ಸಾಂಪ್ರದಾಯಿಕ ವಿಧಾನವನ್ನು ಆಧರಿಸಿ ಮೀಸಲು ಸೈನ್ಯದಿಂದ ಬರುವ

ಸ್ಪರ್ಧೆಯನ್ನೂ ಕೂಡ ತಡೆಯಬಹುದು. ಇವೆರಡೂ ರೈತರ ಅನುಭೋಗದ ಮಟ್ಟವನ್ನು ಹೆಚ್ಚಿಸುತ್ತವೆ ಮತ್ತು ಆ ಮೂಲಕ ಬಂಡವಾಳವು ಯಾವ ಕನಿಷ್ಠ ಬೆಲೆಯಲ್ಲಿ ಶ್ರಮವನ್ನು ನೇಮಕ ಮಾಡಿಕೊಳ್ಳಬಹುದೊ ಅದನ್ನು ಹೆಚ್ಚಿಸುತ್ತದೆ. ಅದೇ ರೀತಿಯಲ್ಲಿ ಬಂಡವಾಳಶಾಹಿ ವಿಧಾನದಲ್ಲಿನ ತೀವ್ರಗತಿಯ ಕ್ರೂಢೀಕರಣವು ಶ್ರಮಿಕರ ಕೊರತೆಯನ್ನು ಹೆಚ್ಚಿಸುತ್ತದೆ ಮತ್ತು ಶ್ರಮಿಕರ ಸ್ಥಾನವನ್ನು ಮೇಲಕ್ಕೇರಿಸುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ ಎಲ್ಲ ಸಂಭಾವ್ಯ ಶ್ರಮಿಕರು ಸುಲಭವಾಗಿ ಸಿಗುವಂತೆ ಮಾಡುವ ಉದ್ದೇಶದಿಂದ ಬಂಡವಾಳಶಾಹಿ ವರ್ಗವು ನೇಮಕಾತಿಯ ನಿರ್ಬಂಧಗಳನ್ನು ವಿರೋಧಿಸುತ್ತದೆ ಮತ್ತು ಆ ಮೂಲಕ ರೈತಾಪಿ ಸಮುದಾಯದಲ್ಲಿ ಕೆಳ ಹಂತದ ಅನುಭೋಗದ ಮಟ್ಟಕ್ಕೆ ತರುವಷ್ಟರ ಮಟ್ಟಿಗೆ ಕೂಲಿಯನ್ನು ಕಡಿತಗೊಳಿಸುತ್ತದೆ. ಗೇಣಿಯ ಪಾಲುದಾರಿಕೆಯನ್ನು ಹೆಚ್ಚಿಸುವ ಇಲ್ಲವೆ ಸಾಂಪ್ರದಾಯಿಕ ಉತ್ಪಾದಕ ಸಾಮರ್ಥ್ಯವು ಸೊರಗಿ ಹೋಗುವಂತೆ ಮಾಡುವ ಮೂಲಕ ಬಂಡವಾಳಶಾಹಿಯ ಆರ್ಥಿಕ ಹಿತಾಸಕ್ತಿಯು ವೃದ್ಧಿಸುತ್ತದೆ. ಬಂಡವಾಳಶಾಹಿ ಸಾಮಾಜಿಕ ಸಂಬಂಧಗಳನ್ನು ಕೃಷಿ ಹಾಗೂ ಇತರ ಉತ್ಪಾದನೆಯ ಮಾದರಿಗೆ ತರುವ ಮೂಲಕ ಕ್ರೂಢೀಕರಣ ಪ್ರಕ್ರಿಯೆಯು ಸಾಂಪ್ರದಾಯಿಕ ಉತ್ಪಾದನೆಯನ್ನು ಅತಿಕ್ರಮಿಸುವುದು ಹೌದು. ಆದರೆ ಎಲ್ಲಿಯವರೆಗೆ ಜನಸಂಖ್ಯೆಯ ಹೆಚ್ಚಳ ಮತ್ತು ಶ್ರಮ-ಉಳಿತಾಯದ ತಾಂತ್ರಿಕ ಬದಲಾವಣೆಯು ಬಂಡವಾಳಶಾಹಿ ವಿಧಾನಕ್ಕೆ ಶ್ರಮಿಕರ ಕಾಯ್ದಿರಿಸುವಿಕೆಯನ್ನು ಖಾತ್ರಿಗೊಳಿಸುವಷ್ಟು ತೀವ್ರಗತಿಯಲ್ಲಿ ಇರುತ್ತದೊ ಅಲ್ಲಿಯವರೆಗೆ ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲಿ ನೇಮಕಾತಿಗಾಗಿ ಕೆಲಸಗಾರರ ಬಿಡುಗಡೆಗೆ ಅನುವು ಮಾಡಿಕೊಡಲು ಸಾಂಪ್ರದಾಯಿಕ ವಿಧಾನದಲ್ಲಿ ಉತ್ಪಾದಕ ಸಾಮರ್ಥ್ಯವನ್ನು ಹೆಚ್ಚಿಸಬೇಕಾದ (ಅಥವಾ ನಿರ್ಮೂಲ ಮಾಡಬೇಕಾದ) ಅಗತ್ಯವಿರುವುದಿಲ್ಲ. ಅದಲ್ಲದೆ, ಮುಕ್ತ ಆರ್ಥಿಕತೆಯಲ್ಲಿ ಆಹಾರದ (ಅಥವಾ ಇತರ ಕೂಲಿ ವಸ್ತುಗಳ) ಸಾಪೇಕ್ಷ ದರವನ್ನು ನಿರ್ಧರಿಸಲು ಸ್ಥಳೀಯ ಕೃಷಿ (ಅಥವಾ ಇತರೆ) ಉತ್ಪಾದನೆಯನ್ನು ಅವಲಂಬಿಸಬೇಕಾಗಿಲ್ಲ, ಹಾಗಾಗಿ ಬಂಡವಾಳೇತರ ಕೃಷಿಯ ಉತ್ಪಾದಕ ಸಾಮರ್ಥ್ಯವನ್ನು ಹೆಚ್ಚಿಸುವ ಆಸಕ್ತಿಯನ್ನು ಅದು ಹೊಂದಿರುವುದಿಲ್ಲ[19]. ಈ ವಾಸ್ತವಾಂಶಗಳು ಈಗಿನ ಮುಂದುವರೆದ ಬಂಡವಾಳಶಾಹಿ ದೇಶಗಳ ಪ್ರಾರಂಭಿಕ ಕ್ರೂಢೀಕರಣ ಪ್ರಕ್ರಿಯೆ ಮತ್ತು ಸಮಕಾಲೀನ ಬಂಡವಾಳಶಾಹಿಯ ಪರಿಧಿ ಇವೆರಡರ ನಡುವಿನ ಪ್ರಮುಖ ವ್ಯತ್ಯಾಸಗಳನ್ನು ಪ್ರತಿನಿಧಿಸುತ್ತವೆ[20]. ಕ್ರೂಢೀಕರಣ ಪ್ರಕ್ರಿಯೆಯ ಸ್ವರೂಪದಲ್ಲಿರುವ ಈ ವೈರುಧ್ಯವು ಅದಕ್ಕೆ ಸಮನಾದ ಶೈಕ್ಷಣಿಕ ವ್ಯವಸ್ಥೆಯ ಚಲನಶೀಲತೆಯಲ್ಲಿರುವ ವೈರುಧ್ಯಕ್ಕೆ ಹೊಂದಿಕೊಂಡಂತೆ ಇರುತ್ತದೆ ಎನ್ನುವುದನ್ನು ನಾವು ನೋಡುತ್ತೇವೆ.

ಭೂ ಮಾಲಿಕ ವರ್ಗದ ಹಿತಾಸಕ್ತಿಗಳು ಸಾಮಾನ್ಯವಾಗಿ ಬಂಡವಾಳಶಾಹಿ ವರ್ಗದ ಹಿತಾಸಕ್ತಿಗೆ ವಿರುದ್ಧವಾಗಿರುತ್ತವೆ; ಭೂ ಮಾಲಿಕರು, ಬಂಡವಾಳಶಾಹಿಗಳಂತಲ್ಲದೆ, ಸಾಂಪ್ರದಾಯಿಕ ಉತ್ಪಾದನೆಯ ಏರಿಕೆಯಿಂದ ಲಾಭವನ್ನು ಪಡೆಯುತ್ತಾರೆ. ಈ ಎರಡೂ ವರ್ಗಗಳ ನಡುವಿನ ವೈರುಧ್ಯವು ಹೊಸ ತಾಂತ್ರಿಕತೆಯಲ್ಲಿ ಮತ್ತು ಹಾಗೆಯೆ ಹೆಚ್ಚು ರೂಢಿಗತವಾದ ಆರ್ಥಿಕ ವ್ಯತ್ಯಯಗಳ ಮೇಲೆ ಸಂಶೋಧನೆ ಹಾಗೂ ಅಭಿವೃದ್ಧಿಯ ಧಿಕ್ಕಿನಲ್ಲಿ ಗಮನ ಹರಿಸುವಂತೆ ಮಾಡುತ್ತದೆ. ಬಂಡವಾಳಶಾಹಿ ವಿಧಾನದಲ್ಲಿನ ತೀವ್ರಗತಿಯ ಕ್ರೂಢೀಕರಣವು ರೈತಾಪಿ ವರ್ಗಕ್ಕೆ ಒಂದು ಪರ್ಯಾಯವಾದ ಜೀವನಾಧಾರ ಮೂಲಗಳನ್ನು ಒದಗಿಸುತ್ತದೆ ಮತ್ತು ಆ ಮೂಲಕ ರೈತಾಪಿವರ್ಗದ ಚೌಕಾಶಿ ಸಾಮರ್ಥ್ಯವು ಹೆಚ್ಚುವಂತೆ ಹಾಗೂ ಗೇಣಿಯ ಪಾಲು ಕಡಿಮೆಯಾಗುವಂತೆ ಮಾಡುತ್ತದೆ. ಆದಾಗ್ಯೂ ಬಂಡವಾಳಶಾಹಿಗಳು ಹಾಗೂ ಭೂಮಾಲಿಕರಿಬ್ಬರೂ ಗೇಣಿಯ ಪಾಲು ಹೆಚ್ಚಿರುವಂತೆ ನೋಡಿಕೊಳ್ಳುವಲ್ಲಿ ಸಮಾನ ಆಸಕ್ತಿ ಹೊಂದಿರುತ್ತಾರೆ.

ಈ ವಿಶ್ಲೇಷಣೆಯ ಶೈಕ್ಷಣಿಕ ಇಂಗಿತದ ಚರ್ಚೆಯು ಬಾಕಿಯಾಗಿದೆಯಾದರೂ ಎಲ್ಲ ಹಂತದ ಶಾಲಾ ಕಲಿಕೆಯ ರಚನೆ, ಅಡಕಾಂಶಗಳು ಮತ್ತು ಲಭ್ಯತೆಯ ಬದಲಾವಣೆಗಳು ಆರ್ಥಿಕ ಲಾಭಗಳ ವಿತರಣೆಯಲ್ಲಿ ಮತ್ತು ಪ್ರತಿ ವರ್ಗಗಳು ಅನುಸರಿಸುವ ವಿತರಣಾ ತಂತ್ರದಲ್ಲಿ ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ ಎನ್ನುವುದು ಸ್ಪಷ್ಟ. ಅದಲ್ಲದೆ, ಸಂಘರ್ಷಪೂರಿತ ಹಾಗೂ ಅದೇ ಸಮಯದಲ್ಲಿ ಪೂರಕವಾದ ಆರ್ಥಿಕ ಹಿತಾಸಕ್ತಿಗಳಿರುವಂತಹ ಸಂಕೀರ್ಣ ವಿನ್ಯಾಸವಿರುವ ಸಂದರ್ಭದಲ್ಲಿ ಶೈಕ್ಷಣಿಕ ನೀತಿಯು ವರ್ಗ ಹೊಂದಾಣಿಕೆಯನ್ನು ರೂಪಿಸುವ ಅಥವಾ ಅದನ್ನು ತಡೆಯುವ ಮತ್ತು ವರ್ಗದ ಒಗ್ಗಟ್ಟಿನ ಬೆಳವಣಿಗೆಗೆ ಹಾಗೂ ಅದಕ್ಕೆ ಅಡ್ಡಿಯನ್ನುಂಟುಮಾಡುವಲ್ಲಿ ಶೈಕ್ಷಣಿಕ ನೀತಿಯು ಪ್ರಮುಖವಾದ ರಾಜಕೀಯ ಹಾಗೂ ಸೈದ್ಧಾಂತಿಕ ಪಾತ್ರವನ್ನು ವಹಿಸಬಹುದಾಗಿದೆ.

## 2. ವೈರುಧ್ಯಮಯ ಅಭಿವೃದ್ಧಿ ಮತ್ತು ಪ್ರಭುತ್ವದ ಶಕ್ತಿ

ಈ ವಿಶ್ಲೇಷಣೆಯ ಸರಳವಾದ ಯಾಂತ್ರಿಕತೆಯು, ಆದಾಯಗಳು ವಿತರಣೆಯಾಗುವ ಪ್ರಕ್ರಿಯೆಯನ್ನು ಹೊರತರುತ್ತವೆ, ಆದರೆ ಕೆಲಸಗಾರರನ್ನು ಕೂಲಿ ಕಾರ್ಮಿಕರ ವ್ಯವಸ್ಥೆಗೆ ಸಮಗ್ರಗೊಳಿಸುವುದರೊಂದಿಗೆ ಉಂಟಾಗುವ ವಿಪರೀತ ಸಾಂಸ್ಥಿಕ ಬದಲಾವಣೆಗಳ ಮತ್ತು ಸಾಮಾಜಿಕ ಸಂಘರ್ಷಗಳ ಬಗ್ಗೆ ಕೇವಲ ಸೂಚನೆಯನ್ನಷ್ಟೆ ನೀಡುತ್ತವೆ. ಬಂಡವಾಳಶಾಹಿ ಉತ್ಪಾದನೆಯ ವಿಸ್ತರಣೆಯು ಸಾಂಪ್ರದಾಯಿಕ ವಿಧಾನದ ಮಹತ್ವವನ್ನು ಅಲ್ಲಗಳೆಯುತ್ತದೆ, ಹಾಗಾಗಿ ಹಳೆಯ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುವ ರಾಜಕೀಯ ಮತ್ತು ಸೈದ್ಧಾಂತಿಕತೆಯ ಶಕ್ತಿಗಳನ್ನು ದುರ್ಬಲಗೊಳಿಸುವ ಪ್ರಕ್ರಿಯೆಗೆ ಚಾಲನೆ ಕೊಡುತ್ತದೆ. ಹಾಗಾಗಿ, ಬಂಡವಾಳಶಾಹಿ ವರ್ಗವು ಉತ್ಪಾದನೆ ಮತ್ತು ಅದರ ಜೊತೆಗೆ ಉತ್ಪಾದನೆಯನ್ನು ಮಾಡುವ ಕಷ್ಟದ ಸಮಸ್ಯೆಯನ್ನು ಎದುರಿಸುತ್ತದೆ. ಬಂಡವಾಳಶಾಹಿ ವಿಧಾನದ ವಿಸ್ತರಣೆ ಹಾಗೂ ಅದರ ಅಸ್ತಿತ್ವವು ಬೆಳೆಯುತ್ತಿರುವ ಶ್ರಮಿಕ ವರ್ಗದ ಉತ್ಪಾದನಾ ಸಾಮರ್ಥ್ಯ ಮತ್ತದರ ರಾಜಕೀಯವನ್ನು ಬಹಳ ಮುಖ್ಯವಾಗಿ ಅವಲಂಬಿಸಿರುತ್ತದೆ. ಶ್ರಮದ ಉತ್ಪಾದನಾ ಸಾಮರ್ಥ್ಯವನ್ನು ಸಾಧಿಸುವುದು ಮತ್ತು ಶ್ರಮದ ಗಣನೀಯ ಮೊತ್ತವನ್ನು ಲಾಭದ ರೂಪದಲ್ಲಿ ತನ್ನದಾಗಿಸಿಕೊಳ್ಳಲು ಬಂಡವಾಳಶಾಹಿ ವರ್ಗಕ್ಕೆ ಅನುವು ಮಾಡಿಕೊಡುವ ಸಾಮಾಜಿಕ ಸಂಬಂಧಗಳನ್ನು ಪುನರುತ್ಪಾದಿಸುವ ಭರವಸೆಯನ್ನು ಕೊಡುವುದು ಯಶಸ್ವಿ ಬಂಡವಾಳಶಾಹಿ ಅಭಿವೃದ್ಧಿಯ ಮೂಲ ಲಕ್ಷಣಗಳಾಗಿರುತ್ತವೆ. ಆದರೆ ಇವೆರಡರಲ್ಲಿ ಯಾವುದನ್ನೂ ಸುಲಭವಾಗಿ ಸಾಧಿಸಲಾಗುವುದಿಲ್ಲ ಮತ್ತು ಬಹಳಷ್ಟು ಸಂದರ್ಭಗಳಲ್ಲಿ ಅವು ಪರಸ್ಪರ ವಿರುದ್ದವಾಗಿರುತ್ತವೆ.

ಬಂಡವಾಳಶಾಹಿ ಲಾಭಗಳು (ಉಳಿದ ಇತರ ವಿಷಯಗಳೊಂದಿಗೆ) ಕೂಲಿ ಕಾರ್ಮಿಕರ ಉತ್ಪಾದನಾ ಸಾಮರ್ಥ್ಯವನ್ನು ಅವಲಂಬಿಸಿರುತ್ತವೆ. ಹಾಗಿದ್ದೂ, ಸಾಮಾನ್ಯವಾಗಿ ಸಾಂಪ್ರದಾಯಿಕ ವಿಧಾನದಲ್ಲಿರುವ ಜನರಲ್ಲಿ ಒಂದು ಉತ್ಪಾದನಾ ಬಂಡವಾಳಶಾಹಿ ಶಕ್ತಿಗೆ ಅಗತ್ಯವಾದ ಸಾಮಾಜಿಕ ಧೋರಣೆಗಳ ಮತ್ತು ತಾಂತ್ರಿಕ ಕೌಶಲಗಳ ಕೊರತೆ ತುಂಬಾ ಇರುತ್ತದೆ[21]. ಸಾಂಪ್ರದಾಯಿಕ ವಿಧಾನದಿಂದ ಹೊರಬರುವಿಕೆಯು ಉತ್ಪಾದನೆಯಲ್ಲಿ ಪಾತ್ರಧಾರಿಗಳಾಗಿರುವ ಪೋಷಕರನ್ನು ಅನುಕರಿಸಿ ಪಡೆಯಲು ಸಾಧ್ಯವಾಗದಂತಹ ಕೌಶಲಗಳ ಬೇಡಿಕೆಯನ್ನು ಹೆಚ್ಚಿಸುತ್ತದೆ. ಕುಟುಂಬ ಅಥವಾ ಬಂಡವಾಳಶಾಹಿಪೂರ್ವ ಸಮುದಾಯಕ್ಕಿಂತ ಬಹಳಷ್ಟು ಮಟ್ಟಿಗೆ ವಿಶಿಷ್ಟವಾದ ಬಂಡವಾಳಶಾಹಿ ಉದ್ದಿಮೆಯು ಬಹಳ ವಿಭಿನ್ನವಾದ ಸಾಮಾಜಿಕ ಸಂಘಟನೆಯಾಗಿರುವುದರಿಂದ ಸಾಂಪ್ರದಾಯಿಕ

ಸಮುದಾಯದಲ್ಲಿ ಬೆಳೆಯುವುದು ಕಾರ್ಖಾನೆಯ ಬದುಕಿಗೆ ಬೇಕಾದ ತರಬೇತಿಯಾಗಿರುವುದಿಲ್ಲ[22]. ಕಾರ್ಖಾನೆಯಲ್ಲಾಗಲಿ, ತೋಟಗಳಲ್ಲಾಗಲಿ ಅಥವಾ ಕಚೇರಿಯಲ್ಲಾಗಲಿ ಕೂಲಿ ಕೆಲಸಗಾರನು ಸಮಯ ಪ್ರಜ್ಞೆ, ಹೊಸ ರೂಪದ ಶಿಸ್ತು, ಹೊಸ ರೂಪದ ಪ್ರೋತ್ಸಾಹಗಳನ್ನು ಮತ್ತು ತನ್ನ ರಕ್ತಸಂಬಂಧದಿಂದಾಚೆ ಅಧಿಕಾರಕ್ಕೆ ಗೌರವ ಕೊಡುವುದನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಅವನು/ಅವಳು ವಿವಿಧ ರೀತಿಯ ದೈನಂದಿನ ಕೆಲಸಗಳ ವಿಸ್ತಾರವಾದ ಮೇಲುಸ್ತುವಾರಿಗೆ ಹೊಂದಿಕೊಳ್ಳಬೇಕಾಗುತ್ತದೆ[23].

ಬಂಡವಾಳಶಾಹಿ ಲಾಭಗಳು ಕೂಡ ಕೆಲಸಗಾರರ ಮೇಲೆ ಬಂಡವಾಳಗಾರರಿಗಿರುವ ಅಧಿಕಾರವನ್ನುಅವಲಂಬಿಸಿರುತ್ತವೆ. ಆದರೆ ಬಂಡವಾಳಶಾಹಿ ಉತ್ಪಾದನಾ ಸಂಬಂಧಗಳ ತೀವ್ರಗತಿಯ ವಿಸ್ತರಣೆಯಿಂದಾಗಿ ಕೆಲಸಗಾರರಲ್ಲಿ ಹುಟ್ಟುವ ವರ್ಗ ಪ್ರಜ್ಞೆ ಮತ್ತು ಪ್ರತಿಭಟನಾ ರಾಜಕೀಯ ಚಟುವಟಿಕೆಯನ್ನು ತಡೆಯುವುದು ಕಷ್ಟವಾಗುತ್ತದೆ. ಇಳಿಮುಖವಾಗುತ್ತಿರುವ ಸಾಂಪ್ರದಾಯಿಕ ಉತ್ಪಾದನಾ ವಿಧಾನದಲ್ಲಿರುವ ಮೀಸಲು ಪಡೆಯ ಅಸ್ತಿತ್ವವು ಬಂಡವಾಳಶಾಹಿ ವಿಧಾನದಲ್ಲಿ ಕೆಲಸಗಾರರ ಸ್ಥಾನವನ್ನು ದುರ್ಬಲಗೊಳಿಸುವುದಾದರೂ ಕೆಲಸಗಾರರ ಬದುಕಿನ ಮತ್ತು ಕೆಲಸದ ಪರಿಸ್ಥಿತಿಯು ಬಂಡವಾಳಶಾಹಿಗಳ ವಿರುದ್ಧ ಸಾಮೂಹಿಕವಾಗಿ ಹೋರಾಟ ಮಾಡಲು ಅವರಿಗೆ ಶಕ್ತಿಯನ್ನು ಕೊಡುತ್ತದೆ. ದೊಡ್ಡ ಕಾರ್ಖಾನೆಗಳಲ್ಲಿ, ಬಹಳಷ್ಟು ಸಂದರ್ಭದಲ್ಲಿ ಬೃಹತ್ ನಗರ ಪ್ರದೇಶಗಳಲ್ಲಿ ಕೆಲಸಗಾರರನ್ನು ಒಟ್ಟಾಗಿ ಹೊರಗೆಸೆಯಲಾಗುತ್ತದೆ. ಸಾಂಪ್ರದಾಯಿಕ ವಿಧಾನದಲ್ಲಿ ನಿಶ್ಚಲತೆ ಉಂಟುಮಾಡುವ ರೈತರ ಉತ್ಪಾದನೆಯಲ್ಲಿದ್ದ ಸಾಮಾಜಿಕ ಪ್ರತ್ಯೇಕತೆಯನ್ನು ಇದು ಕಿತ್ತೊಗೆಯುತ್ತದೆ. ಭೂ ಮಾಲಿಕತ್ವ ಅಥವಾ ಭೂಮಿಯೊಂದಿಗಿನ ಸಂಬಂಧವನ್ನು ಕಳಚಿಕೊಳ್ಳುತ್ತಿರುವ ಕುಟುಂಬಗಳ ಹೆಚ್ಚಳದಿಂದ, ಆ ಕುಟುಂಬದ ಕೆಲಸಗಾರರು ಜೀವನೋಪಾಯಕ್ಕಾಗಿ ಹುಡುಕಾಟ ನಡೆಸುವುದು ಬಾರಿ ಸಂಖ್ಯೆಯ ವಲಸೆಗೆ ಕಾರಣವಾಗುತ್ತಿದೆ. ಅಸ್ಥಿರ ಅಂಶಗಳು ಜನಸಂಖ್ಯೆಯನ್ನು ಬಹುತೇಕ ಒಡೆಯುತ್ತವೆ, ಮತ್ತು ಹೊಂದಾಣಿಕೆ, ಸಮಗ್ರಗೊಳ್ಳುವಿಕೆ ಮತ್ತು ನಿಯಂತ್ರಣಕ್ಕೊಳಪಡುವಲ್ಲಿ ಬಗೆಹರಿಸಲಾಗದಷ್ಟು ಸಮಸ್ಯೆಗಳನ್ನೊಡ್ಡುತ್ತವೆ. ಸಂಪತ್ತಿನ ಅಸಮಾನತೆ ಹೆಚ್ಚು ಎದ್ದು ಕಾಣುವಂತಿರುತ್ತದೆ ಮತ್ತು ಅದನ್ನು ಸಮರ್ಥನೆ ಮಾಡಿಕೊಳ್ಳುವುದು ಹಾಗೂ ಒಪ್ಪಿಕೊಳ್ಳುವುದು ಹೆಚ್ಚು ಕಷ್ಟವಾಗುತ್ತದೆ.

ಹಾಗಾಗಿ, ಬಂಡವಾಳಶಾಹಿ ಉತ್ಪಾದನಾ ವಿಧಾನಕ್ಕೆ ಹೆಚ್ಚಿನ ಸಂಖ್ಯೆಯ ಕೆಲಸಗಾರರನ್ನು - ಹೆಚ್ಚಿನ ಸಂಖ್ಯೆಯ ಕೂಲಿ ಶ್ರಮಿಕರು - ಸಮಗ್ರಗೊಳಿಸಿಕೊಳ್ಳುವುದು ಬಂಡವಾಳಶಾಹಿ ವರ್ಗಕ್ಕೆ ಒಂದು ಸಂಭಾವ್ಯ ವಿರೋಧಿಯನ್ನು ಹುಟ್ಟುಹಾಕುತ್ತದೆ. ರೈತರು ಹಾಗೂ ಭೂ ಮಾಲಿಕ ವರ್ಗದಂತಲ್ಲದ ಈ ವರ್ಗವು ಸಂಖ್ಯೆಯಲ್ಲಿ ಹೆಚ್ಚುತ್ತಾ ಮತ್ತು ಬಂಡವಾಳಶಾಹಿ ವಿಧಾನದ ಬೆಳವಣಿಗೆಯೊಂದಿಗೆ ಹೆಚ್ಚು ಶಕ್ತಿಶಾಲಿಯಾಗುತ್ತಾ ಹೋಗುತ್ತದೆ. ಅವರ ಬೇಡಿಕೆಗಳು ಮತ್ತು ರಾಜಕೀಯ ಜಗತ್ತಿಗೆ ಅವರ ಪ್ರವೇಶವು ಲಾಭತರುವ ಪ್ರಕ್ರಿಯೆಗೆ ಅಡ್ಡಿಪಡಿಸುವ ಮತ್ತು ವರ್ಗ ರಚನೆಯನ್ನು ಮಾರ್ಪಡಿಸುವ ಅಪಾಯವನ್ನೊಡ್ಡುತ್ತವೆ. ವರ್ಗರಚನೆಯ ಕ್ರೂಢೀಕರಣ ಮತ್ತು ಪುನರುತ್ಪಾದನೆಯ ಈ ವೈರುಧ್ಯವು ತೀವ್ರಸ್ವರೂಪದ ವರ್ಗ ಸಂಘರ್ಷ ಹಾಗೂ ರಾಜಕೀಯ ಚಟುವಟಿಕೆಯ ಇತರ ರೂಪಗಳಲ್ಲಿ - ಶ್ರಮಿಕರ ಸಂಘಟನೆಯ ಬೆಳವಣಿಗೆಯಲ್ಲಿ, ಸಾಮೂಹಿಕ ಮುಷ್ಕರಗಳಲ್ಲಿ, ರಾಷ್ಟ್ರೀಯ ಚಳುವಳಿಗಳಲ್ಲಿ, ಜನಪ್ರಿಯ ಪ್ರತಿಭಟನೆಗಳಲ್ಲಿ ಮತ್ತು ಸಮಾಜವಾದಿ ರಾಜಕೀಯ ಪಕ್ಷಗಳ ಹೆಚ್ಚಳದಲ್ಲಿ - ಕಾಣಿಸಿಕೊಂಡಿದೆ.

ಬಂಡವಾಳಶಾಹಿ ವ್ಯವಸ್ಥೆಯನ್ನು ಉಳಿಸಿಕೊಂಡು ಬರುವ ಮತ್ತು ಬಂಡವಾಳಶಾಹಿ ಲಾಭದ ವಿಸ್ತರಣೆಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ವರ್ಗ ಸಂಘರ್ಷವನ್ನು ಪ್ರತ್ಯೇಕ ಉತ್ಪಾದನಾ ಘಟಕಗಳಲ್ಲಿ ಕಾರ್ಮಿಕರು

ನಡೆಸುವ ದಿನನಿತ್ಯದ ಪ್ರತಿಭಟನೆಗಳಿಗೆ ಸಿಮೀತಗೊಳಿಸಬೇಕಾಗುತ್ತದೆ. ಕ್ರೂಢೀಕರಣ ಮತ್ತು ಪುನರುತ್ಪಾದನೆಯ ನಡುವೆ ಸದಾಕಾಲ ಇರುವ ವೈರುಧ್ಯವನ್ನು ಹತ್ತಿಕ್ಕಲೇಬೇಕಾಗುತ್ತದೆ ಇಲ್ಲವೆ ಬಂಡವಾಳಶಾಹಿ ಸಮಾಜದ ರಚನೆಯಲ್ಲಿ ಸುಲಭವಾಗಿ ನಿಭಾಯಿಸಲು ಸಾಧ್ಯವಾಗುವ ದಾರಿಯನ್ನು ಕಂಡುಕೊಳ್ಳಬೇಕಾಗುತ್ತದೆ. ಈ ವೈರುಧ್ಯವನ್ನು ತಾತ್ಕಾಲಿಕವಾಗಿ ಹಲವಾರು ವಿಧದಲ್ಲಿ; ಉತ್ತಮ ಸಾಮಾಜಿಕ ಸುಧಾರಣೆಗಳ ಮೂಲಕ, ಪ್ರಭುತ್ವ ಬಲ ಪ್ರಯೋಗ ಮಾಡುವ ಮೂಲಕ, ಒಡೆದು ಆಳುವ ತಂತ್ರಗಾರಿಕೆಯ ಜನಾಂಗೀಯ, ಬುಡಕಟ್ಟಿನ, ಭಾಷಿಕ , ಲಿಂಗಾಧರಿತ ಮತ್ತು ಇತರ ಐಕ್ಯತೆಗಳನ್ನು ಒಡೆಯುವ ಮೂಲಕ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಪುರುತ್ಪಾದನೆಗೆ ಪೂರಕವಾದ ಸಿದ್ಧಾಂತಗಳ ದೃಷ್ಟಿಕೋನದ ಮೂಲಕ ನಿರ್ವಹಿಸಬಹುದಾಗಿದೆ.

### 3. ನೇಮಕಗಾರ ಹಾಗೂ ದ್ವಾರಪಾಲಕನಾಗಿ ಶಾಲಾ ವ್ಯವಸ್ಥೆ

ಬಂಡವಾಳಶಾಹಿ ಸಾಮಾಜಿಕ ರಚನೆಗಳಲ್ಲಿ ಸ್ಥಿರ ಬಂಡವಾಳಶಾಹಿ ವಿಸ್ತರಣೆಗೆ ಬೇಕಾದ ಪ್ರತಿಯೊಂದು ತಂತ್ರಗಾರಿಕೆಗೆ ಶಾಲಾ ವ್ಯವಸ್ಥೆಯು ಕೊಡುಗೆಯನ್ನು ಸಲ್ಲಿಸುತ್ತದೆ ಮತ್ತು ಆ ಮೂಲಕ ಕನಿಷ್ಟ ಪಕ್ಷ ತಾತ್ಕಾಲಿಕವಾಗಿಯಾದರೂ ಕ್ರೂಢೀಕರಣ ಹಾಗೂ ಪುನರುತ್ಪಾದನೆಯ ವೈರುಧ್ಯವನ್ನು ನಿರ್ವಹಿಸಲು ಪ್ರಭುತ್ವದ ಸಶಸ್ತ್ರ ಶಕ್ತಿಗೆ ಪೂರಕವಾಗಿದೆ. ಬಹಳಷ್ಟು ಬಂಡವಾಳಶಾಹಿ ದೇಶಗಳಲ್ಲಿ ಶಾಲಾ ವ್ಯವಸ್ಥೆಯು ಬಂಡವಾಳಶಾಹಿ ವಲಯಕ್ಕೆ ನೇಮಕಗಾರ ಹಾಗೂ ದ್ವಾರಪಾಲಕನಾಗಿ ಸೇವೆ ಸಲ್ಲಿಸುತ್ತದೆ. ದ್ವಾರಪಾಲಕನ ಪಾತ್ರವನ್ನು ನಾನು ಸದ್ಯದಲ್ಲೇ ಪರಿಗಣಿಸುತ್ತೇನೆ. ನೇಮಕಗಾರನಾಗಿ ಶಾಲಾ ವ್ಯವಸ್ಥೆಯು ಬಂಡವಾಳಶಾಹಿ ಸಂಸ್ಥೆಯ ನವೀನ ಪರಿಸರದ ಉತ್ಪಾದನಾ ಕೆಲಸದಲ್ಲಿ ತೊಡಗಿಕೊಳ್ಳಲು ಸಮರ್ಥವಾದ ಶ್ರಮಿಕ ಶಕ್ತಿಯನ್ನು ಉತ್ಪಾದಿಸಲು ಸಹಾಯ ಮಾಡುತ್ತದೆ. ಶಾಲಾ ಕಲಿಕೆಯು ಕೆಲಸಗಾರರ ಉತ್ಪಾದನಾ ಚಟುವಟಕೆಯನ್ನು ಹೆಚ್ಚಿಸಲು ಪರಸ್ಪರ ಸಂಬಂಧವಿರುವ ಎರಡು ವಿಧಗಳಲ್ಲಿ ಸಹಾಯ ಮಾಡುತ್ತದೆ: ಮೊದಲಿಗೆ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಲು ಮತ್ತು ಶ್ರಮಿಕ ಮಾರುಕಟ್ಟೆಯಂತಹ ಮೂಲ ಸಂಸ್ಥೆಗಳು ನಿರಾತಂಕವಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ಮೌಲ್ಯಗಳನ್ನು, ನಿರೀಕ್ಷೆಗಳನ್ನು, ನಂಬಿಕೆಗಳನ್ನು, ಮಾಹಿತಿಗಳ ವಿಧಗಳನ್ನು ಮತ್ತು ವರ್ತನೆಗಳ ವಿಧಗಳನ್ನು ಪಸರಿಸುವ ಮತ್ತು ಬಲವರ್ಧಿಸುವ ಮೂಲಕ ಮತ್ತು ಎರಡನೆಯದಾಗಿ, ಉತ್ಪಾದನೆಯ ದಕ್ಷತೆಯನ್ನು ಹೆಚ್ಚಿಸಲು ಬೇಕಾದ ತಾಂತ್ರಿಕ ಹಾಗೂ ವೈಜ್ಞಾನಿಕ ಕೌಶಲಗಳನ್ನು ಅಭಿವೃದ್ಧಿಪಡಿಸುವುದು. ಶಾಲೆಯಲ್ಲಿ ಕಲಿತ ಕೆಲವು ಶೈಕ್ಷಣಿಕ ಕೌಶಲಗಳನ್ನು ನೇರವಾಗಿ ಬಂಡವಾಳಶಾಹಿ ಕಾರ್ಯಕ್ಷೇತ್ರಕ್ಕೆ ವರ್ಗಾಯಿಸಬಹುದಾದರೂ ಕೆಲವು ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಲು ಮೂಲ ವೈಜ್ಞಾನಿಕ ಜ್ಞಾನ, ಸಂವಹನ ಕೌಶಲ ಮತ್ತು ಗಣಿತ ಸಾಮರ್ಥ್ಯ ಅಗತ್ಯವಾಗಿರುತ್ತದೆ. ಬಹಳ ಮುಖ್ಯವಾಗಿ, ಈ ಸಾಮರ್ಥ್ಯಗಳು ಹಲವಾರು ನೇರ ಉತ್ಪಾದನಾ ಕೌಶಲಗಳಿಗೆ ನಿರ್ಣಾಯಕವಾದ ಅಡಕಾಂಶಗಳಾಗಿರುತ್ತವೆ.

ಉತ್ಪಾದನಾ ಶಕ್ತಿಗಳ ವಿಸ್ತರಣೆಗೆ ಶಾಲಾ ಕಲಿಕೆಯ ಕೊಡುಗೆಯನ್ನು ಶಾಲಾ ಕಲಿಕೆಯು ಬಂಡವಾಳಶಾಹಿ ವಿಧಾನಕ್ಕೆ ಶ್ರಮಿಕರ ನೇಮಕಗಾರ - ಅಂದರೆ ಉತ್ಪಾದನೆಯ ಸಾಮಾಜಿಕ ಸಂಬಂಧಗಳ ಪುನರುತ್ಪಾದನೆಯಿಂದ - ಎನ್ನುವ ಅದರ ಮತ್ತೊಂದು ಅಂಶದಿಂದ ಬೇರ್ಪಡಿಸಲಾಗುವುದಿಲ್ಲ. ಶಾಲಾ ಕಲಿಕಾ ವ್ಯವಸ್ಥೆಯ ಸಾಮಾಜಿಕ ಸಂಬಂಧಗಳು

ನಿರ್ದಿಷ್ಟವಾಗಿ ರಚಿತವಾದಾಗ ಬಂಡವಾಳಶಾಹಿ ವಿಧಾನಕ್ಕೆ ಯುವ ಜನಾಂಗವನ್ನು ಐಕ್ಯಗೊಳಿಸುವುದಕ್ಕೆ ಅನುವು ಮಾಡಿಕೊಡುತ್ತದೆ. ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಶೈಕ್ಷಣಿಕ ಪ್ರಕ್ರಿಯೆಯ ಮೇಲಿನ ನಿಯಂತ್ರಣವನ್ನು ನಿರಾಕರಿಸಲಾಗುತ್ತದೆ. ಯಶಸ್ಸನ್ನು ಬಾಹ್ಯ ಮಾನದಂಡದಿಂದ (ಶ್ರೇಣಿ ಮತ್ತು ಪರೀಕ್ಷೆಗಳಿಂದ) ಅಳೆಯಲಾಗುತ್ತದೆ. ಅವು ಕೆಲಸ ಮಾಡಲು ಅಗತ್ಯವಾದ ಪ್ರಮುಖ ಪ್ರಚೋದನೆಗಳಾಗುತ್ತವೆ. ಈ ರಚನೆಯು ಜ್ಞಾನದ ಬಗೆಗಿನ ಯಾವುದೇ ಅಂತರ್ಗತವಾದ ಆಸಕ್ತಿಯನ್ನು (ಅಂದರೆ ಒಬ್ಬನ ಪ್ರಯತ್ನದ ಫಲ) ಅಥವಾ ಕಲಿಕೆಯನ್ನು (ಅಂದರೆ ಉತ್ಪಾದನೆಯ ಪ್ರಕ್ರಿಯೆಯನ್ನು) ತನ್ನ ಅಧೀನವಾಗಿಸಿಕೊಳ್ಳುತ್ತದೆ. ವರ್ಗ, ಜನಾಂಗ, ಲಿಂಗ, ಬುಡಕಟ್ಟು, ಭಾಷಿಕ ಮತ್ತು ಇತರ ಭಿನ್ನತೆಗಳು ಶಾಲಾಕಲಿಕೆಯ ಪ್ರವೇಶಾತಿಯ ವ್ಯತ್ಯಾಸದಲ್ಲಿ, ಶಾಲೆ ತೊರೆಯುವ ದರ ಮತ್ತು ಬಡ್ತಿ ಪಡೆಯುವ ಅವಕಾಶಗಳ ವ್ಯತ್ಯಾಸದಲ್ಲಿ ಪ್ರತಿಬಿಂಬಿತವಾಗುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಶಾಲೆಗಳಲ್ಲಿ ಉತ್ಪಾದನೆಯ ಸಾಮಾಜಿಕ ಸಂಬಂಧಗಳ ಪುನರಾವರ್ತನೆಯಾಗುತ್ತದೆ. ಅಧಿಕೃತವಾದ ಅಡಕಾಂಶಗಳಿಗೆ ವಿರುದ್ಧವಾಗಿ ಸಾಂಸ್ಥಿಕ ರಚನೆಯ ಕೇಂದ್ರ ಪಾತ್ರವನ್ನು ಹರ್ಬರ್ಟ್ ಗಿಂಟೀಸ್ ಮತ್ತು ನಾನು 'ಸಾದೃಶ್ಯ ತತ್ವ' (ಕರೆಸ್ಪಾಂಡೆನ್ಸ್ ಪ್ರಿನ್ಸಿಪಲ್) ಎಂದು ಕರೆಯುತ್ತೇವೆ. ಬಂಡವಾಳಶಾಹಿ ವರ್ಗವು ಶಾಲಾ ಕಲಿಕೆಯ ಸಾಮಾಜಿಕ ಸಂಘಟನೆಯನ್ನು ಉತ್ಪಾದನೆಯ ಸಾಮಾಜಿಕ ಸಂಬಂಧಗಳಿಗೆ ಅನುರೂಪವಾಗಿರುವಂತೆ ರಚಿಸುವ ಪ್ರಯತ್ನವನ್ನು ಮಾಡುತ್ತದೆ. ಯಾವುದನ್ನು ಶಿಕ್ಷಣ ತಜ್ಞರು 'ಬಚ್ಚಿಟ್ಟ ಪಠ್ಯಕ್ರಮ' ಎಂದು ಕರೆಯುತ್ತಾರೊ ಅದು ಅತ್ಯಂತ ಮಹತ್ವದ್ದಾಗಿಬಿಡುತ್ತದೆ. ವಿದ್ಯಾರ್ಥಿಗಳು ಶಾಲೆಗಳ್ಲಲಿ ನಿಜಕ್ಕೂ ಏನನ್ನು ಕಲಿಯುತ್ತಿದ್ದಾರೆ ಎನ್ನುವುದಕ್ಕೆ ವಿದ್ಯಾರ್ಥಿಗಳ ನಡುವಿನ ಸಂಬಂಧವು ಶ್ರೇಣೀಕೃತವಾಗಿರುತ್ತದೆಯೊ ಅಥವಾ ಸ್ಪರ್ಧಾತ್ಮಕವಾಗಿರುತ್ತದೆಯೊ, ಅಥವಾ ಸಮಾನತೆ ಹಾಗೂ ಸಹಕಾರದಿಂದ ಕೂಡಿರುತ್ತದೆಯೊ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ನಡುವಿನ ಸಂಬಂಧವು ಪ್ರಜಾಪ್ರಭುತ್ವ ತತ್ವದ್ದಾಗಿರುತ್ತದೆಯೊ ಅಥವಾ ಅಧಿಕಾರಯುತವಾಗಿರುತ್ತದೆಯೊ ಎನ್ನುವುದು ಪಠ್ಯಪುಸ್ತಕ ಅಥವಾ ಔಪಚಾರಿಕ ಪಠ್ಯಕ್ರಮಕ್ಕಿಂತ ಉತ್ತಮವಾದ ಸೂಚ್ಯಂಕಗಳಾಗಿರುತ್ತವೆ. ಮಾನವ ಅಭಿವೃದ್ಧಿ ಅಥವಾ ಅದನ್ನು ಮಿತಿಗೊಳಿಸಿ ಹೇಳುವುದಾದರೆ ಕಾರ್ಮಿಕ ಪಡೆಯ ರಚನೆಯು ಶಾಲೆಯಲ್ಲಿ ಪ್ರಾರಂಭವಾಗುವುದಿಲ್ಲ ಅಥವಾ ಕೊನೆಯಾಗುವುದಿಲ್ಲ. ಕುಟುಂಬ ರಚನೆ ಹಾಗೂ ಮಕ್ಕಳನ್ನು ಬೆಳೆಸುವ ಪ್ರಕ್ರಿಯೆಗಳು ಆರಂಭಿಕ ಸಾಮಾಜೀಕರಣದ ಪ್ರಮುಖ ಭಾಗವಾಗಿರುತ್ತವೆ. ಶಾಲೆಯ ನಂತರ, ಕೆಲಸದಲ್ಲಿನ ಉತ್ಪಾದನೆಯ ಸಾಮಾಜಿಕ ಸಂಬಂಧಗಳು ವ್ಯಕ್ತಿತ್ವದ ಬೆಳವಣಿಗೆಯಲ್ಲಿ ನಿರಂತರ ಪ್ರಭಾವವನ್ನು ಬೀರುತ್ತವೆ. ಕೆಲವು ನಡವಳಿಕೆಗಳಿಗೆ ಮೆಚ್ಚುಗೆ ಮತ್ತೆ ಕೆಲವು ನಡವಳಿಕೆಗಳಿಗೆ ಶಿಕ್ಷೆ ದೊರೆಯುತ್ತದೆ. ಬಂಡವಾಳಶಾಹಿ ಶ್ರಮಿಕ ಪ್ರಕ್ರಿಯೆಯ ಸ್ವರೂಪವು ಜನರು ಅಬಿವ್ಯಕ್ತಿಗೊಳಿಸುವ ಮೌಲ್ಯಗಳು ಮತ್ತು ನಡವಳಿಕೆ ಮತ್ತು ಧೋರಣೆಗಳ ವ್ಯಾಪ್ತಿಯನ್ನು ಮಿತಿಯಲ್ಲಿಡುತ್ತವೆ. ಆದರೆ ಶಾಲಾಕಲಿಕೆಯು ಕಾರ್ಮಿಕ ಪಡೆಯನ್ನು ರಚಿಸುವಲ್ಲಿ, ವಿಶೇಷವಾಗಿ ತೀವ್ರವಾದ ಸಾಮಾಜಿಕ ಬದಲಾವಣೆಗಳ ಅವಧಿಯಲ್ಲಿ, ಪ್ರಮುಖ ಪಾತ್ರವನ್ನು ಖಂಡಿತಾ ವಹಿಸುತ್ತದೆ.

ಶಾಲಾ ಕಲಿಕೆಯಲ್ಲಿರುವ ಸಾಮಾಜಿಕ ಸಂಬಂಧಗಳು ಮತ್ತು ಉತ್ಪಾದನೆಯ ಸಾಮಾಜಿಕ ಸಂಬಂಧಗಳ ನಡುವೆ ಸಾದೃಶ್ಯತೆ ಇದೆ ಎಂದರೆ ಎಲ್ಲ ಮಕ್ಕಳು ಸಮಾನವಾದ ಶಿಕ್ಷಣವನ್ನು ಪಡೆಯುತ್ತಾರೆ ಎಂದರ್ಥವಲ್ಲ. ಶ್ರಮಿಕರ ಶ್ರೇಣೀಕೃತ ವಿಭಜನೆಯ ಲಕ್ಷಣವುಳ್ಳ ಬಂಡವಾಳಶಾಹಿ ಉತ್ಪಾದನೆಗೆ ಲೆಕ್ಕಾಚಾರ ಮಾಡಲು, ನಿರ್ಧಾರ ತೆಗೆದುಕೊಳ್ಳಲು ಮತ್ತು ಆಳ್ವಿಕೆ ಮಾಡಲು ತುಲನಾತ್ಮಕವಾಗಿ ಒಂದು ಸಣ್ಣ ಭವಿಷ್ಯದ ತಾಂತ್ರಿಕ ಮತ್ತು ನಿರ್ವಹಣಾ ಸಿಬ್ಬಂದಿಯ ಅಗತ್ಯವಿರುತ್ತದೆ. ಅದಕ್ಕಿಂತ ಬಹಳಷ್ಟು ದೊಡ್ಡದಾದ ಮತ್ತೊಂದು ಗುಂಪು ಸೂಚನೆಗಳನ್ನು ನಿಖರವಾಗಿ ಪಾಲಿಸಲು 'ಕಲಿಯುತ್ತದೆ'. ಭವಿಷ್ಯದ ಶ್ರಮಿಕ ಶಕ್ತಿಯ ಸ್ತರೀಕರಣವನ್ನು ಭಾಗಶಃ ವಿಭಿನ್ನ ಮಕ್ಕಳಿಗೆ ಲಭ್ಯವಿರುವ

ವಿಭಿನ್ನ ಪ್ರಮಾಣದ ಮತ್ತು ವಿವಿಧ ಶಾಲೆಗಳಿಂದ ಸಾಧಿಸಲಾಗುತ್ತದೆ. ಹಾಗಾಗಿ, ಶಾಲಾ ವ್ಯವಸ್ಥೆಯು ಬಂಡವಾಳಶಾಹಿ ವರ್ಗ ರಚನೆಯನ್ನು ಒಳಗೊಂಡಿರುತ್ತದೆ. ಅದು ನಮಗೆ ಇಲ್ಲಿ ನೇರವಾಗಿ ಸಂಬಂಧಿಸಿಲ್ಲದೆ ಇದ್ದರೂ ಕೂಡ ಸಾದೃಶ್ಯ ತತ್ವವು ಒಂದು ಅಂತಾರಾಷ್ಟ್ರೀಯ ಆಯಾಮವನ್ನು ಹೊಂದಿದೆ: ಎಲ್ಲಿ ಅಂತಾರಾಷ್ಟ್ರೀಯ ಶ್ರಮಿಕ ವಿಭಜನೆಯು ಅತ್ಯಂತ ಮೇಲಿನ ಸ್ತರದಲ್ಲಿ ಪ್ರಾಬಲ್ಯವನ್ನು ಹೊಂದಿರುವ ಹೊರದೇಶದ ನಿರ್ವಾಹಣಾ ಮತ್ತು ತಾಂತ್ರಿಕ ಸಿಬ್ಬಂದಿಯ (ಸಾಮಾನ್ಯವವಾಗಿ ನ್ಯೂಯಾರ್ಕ್ ಮತ್ತು ಟೋಕಿಯೋದಲ್ಲಿ ಸ್ಥಾಪಿತವಾಗಿರುವ) ವರ್ಗ ರಚನೆಯಲ್ಲಿ ಪರ್ಯಾವಸನಗೊಳ್ಳುತ್ತದೆಯೊ ಅಲ್ಲಿ ನಾವು ಅದಕ್ಕೆ ಹೊಂದಿಕೊಂಡಂತಿರುವ ಉದ್ಯೋಗದ ಇನ್ನೂ ಅಭಿವೃದ್ಧಿ ಹೊಂದಿರದ ಸ್ಥಳೀಯ ಕಾಲೇಜು ಪದವೀಧರರ ಬೇಡಿಕೆಯನ್ನು ನಿರೀಕ್ಷಿಸಬಹುದಾಗಿದೆ[24].

ಶಾಲಾಕಲಿಕೆಯ ರಚನೆಯನ್ನು ಬಂಡವಾಳಶಾಹಿ ಉತ್ಪಾದನೆಯ ಸಾಮಾಜಿಕ ಸಂಬಂಧಗಳ ಮಾದರಿಯಲ್ಲಿ ವಿನ್ಯಾಸಗೊಳಿಸುವುದು ಬಂಡವಾಳಶಾಹಿಗಳ ಹಿತಾಸಕ್ತಿಯಾಗಿದೆ ಎಂದು ನಾನು ಪ್ರತಿಪಾದಿಸಿದ್ದೇನೆ. ಅದೇ ರೀತಿಯಲ್ಲಿ ಶಾಲಾ ವ್ಯವಸ್ಥೆಯ ಬೆಳವಣಿಗೆಯ ಪ್ರಮಾಣವನ್ನು ಬಂಡವಾಳಶಾಹಿ ಉತ್ಪಾದನಾ ವಿಧಾನಕ್ಕೆ ಅನುಸಾರವಾಗಿ ನಿಯಂತ್ರಿಸುವುದೂ ಕೂಡ ಬಂಡವಾಳಶಾಹಿ ವರ್ಗದ ಹಿತಾಸಕ್ತಿಯಾಗಿರುತ್ತದೆ. ಶಿಕ್ಷಣವೆನ್ನುವುದು ಯಶಸ್ಸಿನ ಮಾರ್ಗಸೂಚಿ ಎನ್ನುವ ಸಿದ್ಧಾಂತವು ಮಹತ್ವವನ್ನು ಪಡೆದುಕೊಳ್ಳುವುದರಿಂದ ಜನಪ್ರಿಯ ಬೇಡಿಕೆಗಳಿಂದಾಗಿ ಬಂಡವಾಳಶಾಹಿ ಉತ್ಪಾದನಾ ವಿಧಾನಕ್ಕೆ ಬೇಕಾಗಿರುವ ಉದ್ಯೋಗಗಳ ಪ್ರಮಾಣಕ್ಕಿಂತ ಶಿಕ್ಷಣದ ವಿಸ್ತರಣೆಯು ಹೆಚ್ಚು ತೀವ್ರಗತಿಯದ್ದಾಗಿರುತ್ತದೆ. ಕ್ರೂಢೀಕರಣ ಪ್ರಕ್ರಿಯೆಯು ಶ್ರಮ ಉಳಿತಾಯದ ತಾಂತ್ರಿಕತೆಯನ್ನು ಒಳಗೊಳ್ಳುವ ಕಾರಣದಿಂದಾಗಿ ಇದು ವಿಶೇಷವಾಗಿ ನಿಜವಾಗಿರುತ್ತದೆ. ಇಷ್ಟೆಲ್ಲಾ ಆದಾಗ್ಯೂ ವಿಸ್ತರಣೆಯಿಂದಾಗಿ ಐಡಿಯಾಲಜಿಯ ಅಥವಾ ರಾಜಕೀಯ ಲಾಭಗಳು ಬಹಳಷ್ಟಿವೆ ಎಂದಾದರೆ, ಅಥವಾ ಶಿಕ್ಷಣದ ವಿಸ್ತರಣೆಯ ಪ್ರಮಾಣವನ್ನು ಬಂಡವಾಳಶಾಹಿ ವರ್ಗವು ನಿಯಂತ್ರಿಸಲು ವಿಫಲವಾದರೆ ಸಾಮೂಹಿಕ ಶಿಕ್ಷಣಕ್ಕಾಗಿ ಬರುವ ಒತ್ತಡಕ್ಕೆ - ಸಾಂಪ್ರದಾಯಿಕ ಉತ್ಪಾದನಾ ವಿಧಾನದಲ್ಲಿ ಕೆಲಸ ಮಾಡುವ ಯುವಕರಿಗೂ ಕೂಡ - ಪೂರಕವಾಗಿ ಸ್ಪಂದಿಸಬಹುದು.

ಬಂಡವಾಳಶಾಹಿ ವರ್ಗದ ದೃಷ್ಟಿಯಿಂದ ವಿಪರೀತ ವಿಸ್ತರಣೆಯ ಅಪಾಯಗಳು ಸ್ಪಷ್ಟವಾಗಿವೆ. ಮೊದಲಿಗೆ, ಎಲ್ಲರಿಗೂ ಶಿಕ್ಷಣ ಎನ್ನುವುದು ಸಾಂಪ್ರದಾಯಿಕ ಉತ್ಪಾದನಾ ವಿಧಾನದಲ್ಲಿನ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಬಹುದು ಮತ್ತು ತಾಂತ್ರಿಕತೆಯ ಪ್ರಗತಿಯನ್ನು ಸಾಧಿಸಬಹುದು. ಈ ಬೆಳವಣಿಗೆಯನ್ನು ತಕ್ಷಣಕ್ಕೆ ಬೇಕಾಗುವ ಅತ್ಯಂತ ಕಡಿಮೆ ವೇತನದ ಶ್ರಮಿಕರ ಪೂರೈಕೆಯನ್ನು ಉಳಿಸಿಕೊಳ್ಳುವ ಹಿತಾಸಕ್ತಿಯನ್ನು ಹೊಂದಿರುವ ಬಂಡವಾಳಶಾಹಿ ವರ್ಗವು ಇದನ್ನು ವಿರೋಧಿಸಬಹುದು[25]. ಎರಡನೆಯದಾಗಿ, ಶಿಕ್ಷಣದ ವಿಪರೀತ ವಿಸ್ತರಣೆಗೆ ಆಗುವ ವೆಚ್ಚ ಬಂಡವಾಳಶಾಹಿಗಳ ಮೇಲೆ ತೆರಿಗೆಯ ಹೊರೆಯಾಗಿ ಬೀಳಬಹುದು ಮತ್ತು ಪ್ರಭುತ್ವದ ಹಣಕಾಸಿನ ಸಂಪನ್ಮೂಲಗಳನ್ನು ಹೆಚ್ಚು ಲಾಭದಾಯಕವಾಗುವ ಯೋಜನೆಗಳು ಮತ್ತು ಸಬ್ಸಿಡಿಗಳಿಂದ ಬೇರೆಡೆಗೆ ವರ್ಗಾಯಿಸಬಹುದು. ಮೂರನೆಯದಾಗಿ, ಒಂದು ಕಾಲದ ಸಂಪೂರ್ಣ ಜನಸಂಖ್ಯೆಯು ಸಾಕಷ್ಟು ಉತ್ತಮವಾದ ಶಿಕ್ಷಣವನ್ನು ಪಡೆಯಬಹುದಾದರೆ, ಎಲ್ಲರೂ ಬಂಡವಾಳಶಾಹಿ ವಿಧಾನದಲ್ಲಿ ಉದ್ಯೋಗವನ್ನು ನಿರೀಕ್ಷಿಸಬಹುದು. ಇದರ ಫಲಿತಾಂಶವೆಂದರೆ, ನಗರಕ್ಕೆ ವಲಸೆ ಹೋಗುವುದು, ಬೃಹತ್ ನಗರ ನಿರುದ್ಯೋಗ, ಮತ್ತು ಅಯಶಸ್ವಿಯಾದವರ ಹತಾಶೆಯ ನಿರೀಕ್ಷೆಗಳಿಂದಾಗುವ ಪ್ರತಿಭಟನೆಗಳು.

ಇದರ ಪರಿಣಾಮವಾದ ವೇತನದಲ್ಲಿನ ಉಳಿತಾಯವು ಬಂಡವಾಳಶಾಹಿ ವರ್ಗಕ್ಕೆ ಸ್ವಾಗತಾರ್ಹವೆನಿಸಿದರೂ ಮೀಸಲು ಪಡೆಯ ನಿರ್ವಹಣೆಗೆ ಇದಕ್ಕಿಂತಲೂ ಕಡಿಮೆ ವೆಚ್ಚದ ಮತ್ತು ಕಡಿಮೆ ಅಪಾಯದ ಮಾರ್ಗಗಳಿವೆ. ಏನೇ ಆದರೂ, ಸಾರ್ವತ್ರಿಕ ಶಿಕ್ಷಣವು ರೈತಾಪಿ ವರ್ಗಕ್ಕೂ ಮತ್ತು ಕೂಲಿ ಕಾರ್ಮಿಕರಿಗೂ ನಡುವೆ ಒಂದು ಸಮಾನವಾದ ಪ್ರಜ್ಞೆಯ ಬೆಳವಣಿಗೆಗೆ ಪೂರಕವಾಗಿದೆ ಎನ್ನುವ ಸಾಧ್ಯತೆಯು ಯಾವುದೇ ತಕ್ಷಣದ ಆರ್ಥಿಕ ಲಾಭಗಳನ್ನು ತಲೆಕೆಳಗು ಮಾಡಬಹುದಾಗಿದೆ. ಹಾಗಾಗಿ, ಕೆಲವು ಯುವ ಜನತೆಯನ್ನು ವೇತನದ ಕೆಲಸಕ್ಕೆ ತಯಾರಿ ಮಾಡುತ್ತಲೆ ಶಾಲಾ ವ್ಯವಸ್ಥೆಯು - ಅದು ಬಂಡವಾಳಶಾಹಿ ಬೆಳವಣಿಗೆಯ ಪ್ರಕ್ರಿಯೆಗೆ ಕೊಡುಗೆಯನ್ನು ಸಲ್ಲಿಸಬೇಕಾದರೆ - ದ್ವಾರಪಾಲಕನಾಗಿಯೂ ಕೆಲಸ ಮಾಡಬೇಕಾಗುತ್ತದೆ. ಉದ್ಯೋಗಕ್ಕೆ ಶಾಲೆಯ ಶಿಫಾರಸು ಪತ್ರಗಳ ಅಗತ್ಯ ಈ ಉದ್ದೇಶವನ್ನು ಸಾಧಿಸುತ್ತದೆ. ಶಿಫಾರಸುಗಳು ಸೂಚಿಸುವ 'ಕಲಿಕೆ'ಯು ಬೇಕಾದ ಉದ್ಯೋಗಕ್ಕೆ ಸಂಬಂಧವನ್ನು ಹೊಂದಿಲ್ಲದಿದ್ದರೂ ಕೂಡ, ಕೆಲವು ನಿರ್ದಿಷ್ಟ ಸಂಖ್ಯೆಯ ಜನರನ್ನು ಹೊರಗಿಡಲು ಬೇಕಾದ ವಸ್ತುನಿಷ್ಟ ಮಾರ್ಗಗಳನ್ನು ಅದು ತೋರಿಸುತ್ತದೆ.

### 4. ವರ್ಗ ಹೊಂದಾಣಿಕೆಗಳು ಮತ್ತು ದ್ವಿವಿಧ ಶಿಕ್ಷಣ

ಹೀಗೆ, ಬಂಡವಾಳಶಾಹಿ ವ್ಯವಸ್ಥೆಯ ದೀರ್ಘ ಕಾಲದ ಪುನರುತ್ಪಾದನೆಯು ಸಂಭಾವ್ಯ ಕೂಲಿ ಕಾರ್ಮಿಕರ ಪ್ರಮಾಣವನ್ನು ನಿಯಂತ್ರಿಸಲು ಸಾಕಷ್ಟು ಬಾರಿ ಶೈಕ್ಷಣಿಕ ಹಾಗೂ ಉದ್ಯೋಗ ನೀತಿಯನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಕಾರ್ಮಿಕರಿಗೆ ಸಾಂಪ್ರದಾಯಿಕ ವಿಧಾನದಲ್ಲಿ ಬರುವ ಆದಾಯಕ್ಕಿಂತ ಮಿಗಿಲಾದ ಗಣನೀಯವಾದ ಕೂಲಿಯ ಅಧಿಕಮೌಲ್ಯವನ್ನು ಬಂಡವಾಳಶಾಹಿ ಉತ್ಪಾದನ ವಿಧಾನದಲ್ಲಿ ಕೊಡಬೇಕಾಗುವುದು ಈ ತಂತ್ರಕ್ಕೆ ಬಂಡವಾಳಶಾಹಿಗಳು ತೆರಬೇಕಾದ ಬೆಲೆಯಾಗಿದೆ. ಕೂಲಿಯ ಈ ಅಧಿಕ ಮೌಲ್ಯವು ಒಂದು ಸಣ್ಣ ಕಾರ್ಮಿಕ ವರ್ಗಕ್ಕೆ ಬಂಡವಾಳಶಾಹಿ ವ್ಯವಸ್ಥೆಗೆ ಬದ್ಧವಾಗಿರುವುದಕ್ಕೆ ಬುನಾದಿ ಹಾಕುತ್ತದೆ ಮತ್ತು ಶಿಕ್ಷಣ, ಅಂತಃಪ್ರಜ್ಞೆ ಮತ್ತು ಭೌತಿಕ ಸವಲತ್ತುಗಳಿಗೆ ಸಂಬಂಧಿಸಿದಂತೆ ಅವರನ್ನು ಸಾಂಪ್ರದಾಯಿಕ ವಿಧಾನದಲ್ಲಿ ಕೆಲಸ ಮಾಡುವವರಿಗಿಂತ ಭಿನ್ನವಾಗಿರಿಸುತ್ತದೆ[26]. ಇದಕ್ಕೆ ಪ್ರತಿಯಾಗಿ ಕೂಲಿ ಕಾರ್ಮಿಕರು, ಕೆಲಸಗಳಿಗೆ ಇರುವ ಸ್ಪರ್ಧೆಯನ್ನು ಮಿತಿಗೊಳಿಸುವ ಆಸೆಯಿಂದ, ತಮಗೆ ಮತ್ತು ತಮ್ಮ ಮಕ್ಕಳಿಗೆ ಹೊರತುಪಡಿಸಿ ಶಿಕ್ಷಣವು ಇತರರಿಗೂ ಲಭ್ಯವಾಗಬೇಕು ಎನ್ನುವ ಯಾವುದೇ ಆಸಕ್ತಿಯನ್ನು ಹೊಂದಿರುವುದಿಲ್ಲ.

ಭೂಮಾಲೀಕರು ಮತ್ತು ಸಾಂಪ್ರದಾಯಿಕ ಗಣ್ಯರುಗಳಿಗೆ ಶಿಕ್ಷಣವನ್ನು ವಿಸ್ತರಿಸುವುದರಲ್ಲಿ ಯಾವುದೇ ಆಸಕ್ತಿ ಇರುವುದಿಲ್ಲ. ಅವರ ಮುಖ್ಯ ಆರ್ಥಿಕ ಸ್ವತ್ತು ಭೂಮಿ, ಅದನ್ನು ಜೀವನೋಪಾಯಕ್ಕೆ ಸಾಕಾಗುವಷ್ಟು ಕೃಷಿ ಮಾಡುವುದಷ್ಟೇ ಅವರ ಆಸಕ್ತಿ. ಏಕೆಂದರೆ, ತಾಂತ್ರಿಕ ಅಭಿವೃದ್ಧಿಯ ಮಿತಿ ಮತ್ತು ಅದರ ಸಾಮಾಜಿಕ ಸಂಬಂಧಗಳು ಕುಟುಂಬ ಅಥವಾ ಸಮುದಾಯವನ್ನು ಆಧರಿಸಿರುತ್ತವೆ. ಕಾರ್ಮಿಕರಿಗೆ ಸಾಮಾನ್ಯವಾಗಿ ಶಾಲೆಗಳಲ್ಲಿ ಸಿಗುವ ತರಬೇತಿಯನ್ನಾಗಲಿ ಅಥವಾ ಸಾಮಾಜೀಕರಣವನ್ನಾಗಲೀ ಸಾಂಪ್ರದಾಯಿಕ ಉತ್ಪಾದನೆಯು ಬೇಡುವುದಿಲ್ಲ. ವಾಸ್ತವದಲ್ಲಿ ಶಾಲೆ ಎನ್ನುವುದು ಮಕ್ಕಳಿಗೆ ಸಾಂಪ್ರದಾಯಿಕ ಆರ್ಥಿಕತೆಯಿಂದ ಪಲಾಯನಗೈಯ್ಯುವ ಒಂದು ಮಾರ್ಗವಾಗಿದೆ. ಏಕೆಂದರೆ, ಸಾಂಪ್ರದಾಯಿಕ ಆರ್ಥಿಕತೆಯನ್ನು ಕಾಯ್ದುಕೊಂಡು ಬರುವುದು ಸಾಂಪ್ರದಾಯಿಕ ಗಣ್ಯರಿಗೆ ಮತ್ತು ಭೂ ಮಾಲೀಕರಿಗೆ ಅತಿ ಮುಖ್ಯವಾಗುವುದರಿಂದ ಅವರು ಶಿಕ್ಷಣದ ವಿಸ್ತರಣೆಯನ್ನು ವಿರೋಧಿಸುವ ನಿಲುವನ್ನು ತೆಗೆದುಕೊಳ್ಳುತ್ತಾರೆ.

ಭೂಮಾಲಿಕ ವರ್ಗ ಮತ್ತು ಸಾಂಪ್ರದಾಯಿಕ ಗಣ್ಯರ ರಾಜಕೀಯ ಹಿತಾಸಕ್ತಿಗಳು ಸಾಮೂಹಿಕ ಶಿಕ್ಷಣಕ್ಕೆ ಅವರ ವಿರೋಧವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ. ಸಾಂಪ್ರದಾಯಿಕ ಗಣ್ಯರ ರಾಜಕೀಯ ನಿಲುವಿಗೆ ಸಾಂಪ್ರದಾಯಿಕ ಮೌಲ್ಯಗಳನ್ನು ಕಾಪಾಡಿಕೊಂಡು ಬರುವುದು ಮತ್ತು ಇದನ್ನು ಧಾರ್ಮಿಕ ಸಂಸ್ಥೆಗಳು ಬೆಂಬಲಿಸುವುದು, ಬಂಡವಾಳಶಾಹಿ ಆರ್ಥಿಕ ಬದುಕು ಈ ಮೌಲ್ಯಗಳು ಮತ್ತು ಸಂಸ್ಥೆಗಳನ್ನು ದುರ್ಬಲಗೊಳಿಸಲು ಮತ್ತು ಮಿತಿಗೊಳಿಸಲು ಬಯಸುತ್ತವೆ. ವಾಸ್ತವದಲ್ಲಿ, ಐತಿಹಾಸಿಕವಾಗಿ ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿ ಪ್ರಾಥಮಿಕ ಶಾಲೆಗಳ ವಿಸ್ತರಣೆಗೆ ಬಂಡವಾಳಶಾಹಿ ಬೆಂಬಲಕ್ಕೆ ಧಾರ್ಮಿಕ ಮತ್ತು ಸಾಂಪ್ರದಾಯಿಕ ಆಳ್ವಿಕೆಯ ಬದಲಾಗಿ ಉದಾರವಾದಿ ಪ್ರಭುತ್ವ ಮತ್ತು ಆಧುನಿಕ ಅಧಿಕಾರಶಾಹಿಯ ಅಧಿಕಾರವನ್ನು ಗೌರವಿಸುವ ಹವ್ಯಾಸವನ್ನು ಪರಿಣಾಮಕಾರಿಯಾಗಿ ಬೆಳೆಸುವ ಉದ್ದೇಶ ಭಾಗಶಃ ಕಾರಣವಾಗಿತ್ತು, 19 ನೆ ಶತಮಾನದ ಮದ್ಯಭಾಗದಲ್ಲಿ ಮಾರ್ಕ್ಸ್ '....ಫ್ರೆಂಚ್ ರೈತರ ಆಧುನಿಕ ಹಾಗೂ ಸಾಂಪ್ರದಾಯಿಕ ಪ್ರಜ್ಞೆಯು ತನ್ನ ಅಧಿಪತ್ಯಕ್ಕೆ ಸ್ಪರ್ದಿಸಿತ್ತು. ಈ ಪ್ರಕ್ರಿಯೆಯು ಶಾಲಾ ಶಿಕ್ಷಕರು ಮತ್ತು ಪುರೋಹಿತರ ನಡುವಿನ ಬಿಡುವಿಲ್ಲದ ಹೋರಾಟದ ರೂಪವನ್ನು ಪಡೆಯಿತು'[27]. ಎಂದು ಬರೆಯುತ್ತಾನೆ.

ಕೂಲಿ ಕಾರ್ಮಿಕರಲ್ಲಿ ಶಿಕ್ಷಣವನ್ನು ಉತ್ತೇಜಿಸಲು ಬಂಡವಾಳಶಾಹಿಗಳು ಮತ್ತು ಕಾರ್ಮಿಕರಿಬ್ಬರೂ ಆಸಕ್ತಿಯನ್ನು ಹೊಂದಿರುತ್ತಾರಾದರೂ ಸಾರ್ವತ್ರಿಕ ಶಿಕ್ಷಣದ ವಿರೋಧಕ್ಕೆ ಸಂಬಂಧಿಸಿದಂತೆ ಈ ಎರಡೂ ಗುಂಪುಗಳು ಭೂ ಮಾಲೀಕ ವರ್ಗ ಮತ್ತು ಸಾಂಪ್ರದಾಯಿಕ ಗಣ್ಯರೊಂದಿಗೆ ವಿರೋಧವನ್ನು ಹಂಚಿಕೊಳ್ಳುತ್ತಾರೆ. ಸಾಮೂಹಿಕ ಶಿಕ್ಷಣವು ಹರಡುವುದನ್ನು ಮಿತಿಗೊಳಿಸುವ ಪ್ರಯತ್ನದಲ್ಲಿ ಈ ಸಮಾನ ಹಿತಾಸಕ್ತಿಗಳು ಬಂಡವಾಳಶಾಹಿ-ಭೂ ಮಾಲೀಕ-ಕಾರ್ಮಿಕ ಕೂಟಕ್ಕೆ ಆದಾರವನ್ನು ಒದಗಿಸುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ, ಬಂಡವಾಳಶಾಹಿ ಕೇಂದ್ರದಲ್ಲಿ ಭೂ ಮಾಲಿಕ ವರ್ಗ ಮತ್ತು ಸಾಂಪ್ರದಾಯಿಕ ಗಣ್ಯರು ಸಾರ್ವತ್ರಿಕ ಶಾಲಾಕಲಿಕೆಯನ್ನು ವಿರೋದಿಸುವಲ್ಲಿ ಪ್ರತ್ಯೇಕವಾಗುತ್ತಾರೆ. ಇದು ಬಹಳಷ್ಟು ದೇಶಗಳಲ್ಲಿ 19ನೆ ಶತಮಾನದ ಕೊನೆಯಲ್ಲಿ ಮತ್ತು 20ನೆ ಶತಮಾನದ ಪ್ರಾರಂಬದಲ್ಲಿ ನಿಲ್ಲದೆ ಮುಂದುವರೆಯಿತು. ಹಾಗಾಗಿ, ಬಂಡವಾಳಶಾಹಿ ಪರಿಧಿಯಲ್ಲಿನ ಕ್ರೂಡೀಕರಣ ಪ್ರಕ್ರಿಯೆ ಮತ್ತು ಅದರ ಪರಿಣಾಮವಾದ ವರ್ಗ ಹೊಂದಾಣಿಕೆಯ ಸಂಯೋಜನೆಯು ಬಂಡವಾಳಶಾಹಿ ಕೇಂದ್ರದ ಅನುಭವಕ್ಕಿಂತ ವಿಭಿನ್ನವಾದ ಶೈಕ್ಷಣಿಕ ವಿಸ್ತರಣೆಯ ವಿನ್ಯಾಸವನ್ನು ಹುಟ್ಟುಹಾಕುವ ಸಾಧ್ಯತೆ ಇದೆ.

ಅದೇನೇ ಇರಲಿ, ಬಡ ಕಾರ್ಮಿಕರು ಮತ್ತು ರೈತರ ಸಾಮೂಹಿಕ ಒತ್ತಡ ಮತ್ತು ಅದರೊಟ್ಟಿಗೆ ಸೈದ್ಧಾಂತಿಕ ಪರಿಗಣನೆಗಳು ಎಲ್ಲ ಮಕ್ಕಳಿಗೂ ಯಾವುದೋ ಒಂದು ಬಗೆಯ ಶಾಲಾಕಲಿಕೆಗೆ ಬೇಡಿಕೆಯನ್ನು ಹೆಚ್ಚಿಸಬಹುದು. ಈ ಪ್ರತಿ-ಒತ್ತಡದ ಪರಿಣಾಮವೆ ದ್ವಿವಿಧ ಶೈಕ್ಷಣಿಕ ವ್ಯವಸ್ಥೆ: ಅಂದರೆ ಬಹುಸಂಖ್ಯಾತರಿಗೆ ಒಂದು ಅಲ್ಪಕಾಲದ ಎರಡನೆಯ ದರ್ಜೆಯ ಶಿಕ್ಷಣ ಮತ್ತು ಉತ್ಪಾದನಾ ಚಟುವಟಿಕೆಗಳನ್ನು ಉತ್ತೇಜಿಸಲು ಸಾಕಾಗುವಷ್ಟು ಮತ್ತು ಬಂಡವಾಳಶಾಹಿ ವಿಧಾನದಲ್ಲಿ ಗಣನೀಯ ಮಟ್ಟದ ಕಾರ್ಮಿಕರ ಕೊರತೆಯನ್ನು ತಪ್ಪಿಸಲು ಸಾಕಾಗುವಷ್ಟು ಅದಕ್ಕಿಂತ ಉತ್ತಮ ಶಿಕ್ಷಣವನ್ನು ನೀಡುವುದು. ಸಹಾಯಧನ ನೀಡುವ ಅಂತಾರಾಷ್ಟ್ರೀಯ ಏಜನ್ಸಿಗಳಲ್ಲಿ ಜನಪ್ರಿಯವಾಗಿರುವ 'ಅನೌಪಚಾರಿಕ' ಶಿಕ್ಷಣವು ಬಹುಸಂಖ್ಯಾತರಿಗೆ ಕಡಿಮೆ ವೆಚ್ಚದ ದೈಹಿಕ ತರಬೇತಿಗಳನ್ನು ಮತ್ತು ಕೆಲವರಿಗೆ ಹೆಚ್ಚು ಸಾಂಪ್ರದಾಯಿಕ ಶಿಕ್ಷಣವನ್ನು ಕೊಡುವುದರ ಮೂಲಕ ದ್ವಿವಿಧ ಶೈಕ್ಷಣಿಕ ರಚನೆಯನ್ನು ಮತ್ತಷ್ಟು ಸಾಂಸ್ಥೀಕರಣಗೊಳಿಸುವ ಸಾಧ್ಯತೆಯನ್ನು ಹೊಂದಿದೆ[28].

ದ್ವಿವಿಧ ಶೈಕ್ಷಣಿಕ ರಚನೆಯ ಉದಾಹರಣೆಗಳಿಗೇನೂ ಕೊರತೆಯಿಲ್ಲ. ಗ್ರಾಮೀಣ ಮತ್ತು ನಗರ ಶಾಲೆಗಳ ನಡುವೆ, ಅಥವಾ ಪ್ರಾಥಮಿಕ ಮತ್ತು ಸೆಕಂಡರಿ ಶಾಲೆಗಳು ಅಥವಾ ವಿಶ್ವವಿದ್ಯಾಲಯಗಳ ನಡುವೆ ಇರುವ ಶೈಕ್ಷಣಿಕ ವೆಚ್ಚದಲ್ಲಿರುವ ವ್ಯತ್ಯಾಸವು ಇದಕ್ಕೆ ಸಾಕ್ಷಿಯಾಗಿದೆ (ಕೋಷ್ಟಕ 1). ನಗರ ಪ್ರಾಥಮಿಕ ಶಾಲೆಗಳ ನಂತರದ ಶಾಲೆಗಳು ಬಜೆಟ್ಟಿನ ಹಂಚಿಕೆಯ ಪಾಲಿನಲ್ಲಿ ಒಟ್ಟು ಪ್ರವೇಶಾತಿಯಲ್ಲಿರುವ ಅವುಗಳ ಪಾಲಿಗಿಂತ ಬಹಳಷ್ಟು ಹೆಚ್ಚು ಪಾಲನ್ನು ಪಡೆಯುತ್ತವೆ[29]. ಹಾಗೆಯೆ ಸಾಂಪ್ರದಾಯಿಕ ಆರ್ಥಿಕ ವಿಶ್ಲೇಷಣೆಯ ಪ್ರಕಾರ ಬಡ ಬಂಡವಾಳಶಾಹಿ ದೇಶಗಳು ಇತರ ಶಾಲಾಕಲಿಕೆಗಳಿಗೆ ಹೋಲಿಸಿದರೆ ಪ್ರಾಥಮಿಕ ಶಾಲಾಕಲಿಕೆಗೆ 'ಅತಿ ಕಡಿಮೆ' ಹಣವನ್ನು ತೊಡಗಿಸುತ್ತವೆ

**ಕೋಷ್ಟಕ 1.** *ಶಾಲಾ ಕಲಿಕೆಯ ವಿವಿಧ ಹಂತಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಸಂಪನ್ಮೂಲದ ಒಳಹರಿವು;*
ಸೆಕಂಡರಿ ಮತ್ತು ಉನ್ನತ ಶಿಕ್ಷಣದ ನೇರ ಸಾಮಾಜಿಕ ವೆಚ್ಚಗಳು ಮತ್ತು ಪ್ರಾಥಮಿಕ ಸಾಮಾಜಿಕ ವೆಚ್ಚಗಳ ಅನುಪಾತಗಳು

| | ಶೈಕ್ಷಣಿಕ ಮಟ್ಟ | |
|---|---|---|
| ದೇಶ | ಸೆಕೆಂಡರಿ | ಉನ್ನತ |
| ಪ್ಯುರೆಟೊ ರಿಕೊ | 1.5 | 11.6 |
| ಮೆಕ್ಸಿಕೊ | 5.0 | 9.0 |
| ವೆನೆಜುವೆಲಾ | 3.0 | 12.5 |
| ಕೊಲಂಬಿಯಾ | 2.7 | 17.9 |
| ಚಿಲಿ | 1.5 | 8.0 |
| ಬ್ರೆಜಿಲ್ | 2.9 | 18.0 |
| ಇಸ್ರೆಲ್ | 2.7 | 16.8 |
| ಭಾರತ | 5.1 | 17.6 |
| ಮಲೇಷಿಯಾ | 1.9 | 13.0 |
| ದಕ್ಷಣ ಕೊರಿಯಾ | 2.4 | 5.5 |
| ನೈಜಿರಿಯಾ | 7.2 | 100.0 |
| ಘಾನಾ | 6.2 | 118.7 |
| ಕೀನ್ಯಾ | 11.8 | 160.4 |
| ಉಗಾಂಡ | 14.5 | 117.6 |
| ಮಾಪನರಹಿತ ಸರಾಸರಿ | 4.9 | 44.8 |

ಮೂಲ: ಸಾಕರೊಪೌಲೊಸ್ (Psacharopoulos) (1973), ಪು. 179 ಇದರಿಂದ ಗಣಕೀರಿಸಲ್ಪಟ್ಟಿದ್ದು.

ಎನ್ನುವುದಕ್ಕೂ ಪುರಾವೆಗಳಿವೆ. ಕೋಷ್ಟಕ 2 ಶಾಲಾಕಲಿಕೆಯ ಸಾಮಾಜಿಕ ಪ್ರತಿಫಲದ ಪ್ರಮಾಣವನ್ನು ತೋರಿಸುತ್ತದೆ:

**ಕೋಷ್ಟಕ 2.** *ಪ್ರಾಥಮಿಕ ಶಾಲಾಕಲಿಕೆಯಲ್ಲಿ ಸಾಪೇಕ್ಷವಾದ 'ಕಡಿಮೆ ತೊಡಗಿಸುವಿಕೆ': ಬಡ ಹಾಗೂ ಮಧ್ಯಮ ಆದಾಯದ ದೇಶಗಳಲ್ಲಿರುವ ಶಾಲಾಕಲಿಕೆಯ ವಿವಿಧ ಹಂತಗಳ ಸರಾಸರಿ ಸಾಮಾಜಿಕ ಲಾಭಗಳು.*

| ಶಾಲಾಕಲಿಕೆಯ ಹಂತಗಳು | ಸಾಮಾಜಿಕ ಆಂತರಿಕ ಪ್ರತಿಫಲಗಳ ಪ್ರಮಾಣ (%)* | ಸಾಮಾಜಿಕ ಅನುಕೂಲ/ ವೆಚ್ಚದ ಅನುಪಾತ** |
|---|---|---|
| ಪ್ರಾಥಮಿಕ | 26 | 9.50 |
| ಸೆಕೆಂಡರಿ | 17 | 2.37 |
| ಉನ್ನತ | 13 | 2.00 |

*ಸಾಕರೊಪೌಲೊಸ್ (Psacharopoulos) (1973), ಪು. 163 ಇದರಿಂದ ಗಣಕೀಕರಿಸಿದ್ದು. ಮಾದರಿಯಲ್ಲಿನ ದೇಶಗಳು ಕೋಷ್ಟಕ 1 ರಲ್ಲಿ ಇರುವಂತೆಯೆ ಇವೆ, ಅದರೊಟ್ಟಿಗೆ ಸಿಂಗಪುರ್, ಫಿಲಿಪೈನ್ಸ್ ಮತ್ತು ಥಾಯ್ಲೆಂಡ್.

**ಹೆಡ್ಲಿ (1976). 10% ರಿಯಾಯತಿ ಪ್ರಮಾಣದಲ್ಲಿ ಲೆಕ್ಕ ಹಾಕಲಾಗಿದೆ. ಇದಕ್ಕೂ ಮೇಲಿನ ಮಾದರಿಗಳಿವೆ ಜೊತೆಗೆ ಜಾಂಬಿಯಾ. ಈ ಶ್ರೇಣಿಯ ಕಚ್ಚಾ ದತ್ತಾಂಶಗಳು ಮತ್ತು ಸಾಕರೊಪೌಲೊಸ್ ನಿಂದ ಗಣಕೀಕರಿಸಿದ್ದು ಒಂದೇ ತರ ಕಾಣುತ್ತವೆ, ಆದರೆ ಒಂದೇ ಅಲ್ಲ. ಇಬ್ಬರು ಲೇಖಕರು ದತ್ತಾಂಶವನ್ನು ವಿಭಿನ್ನವಾಗಿ ಹೊಂದಾಣಿಕೆ ಮಾಡಿದ್ದಾರೆ.

ಪ್ರಾಥಮಿಕ ಶಾಲಾಕಲಿಕೆಯ ಪ್ರತಿಫಲದ ಪ್ರಮಾಣವು ಉನ್ನತ ಶಿಕ್ಷಣಕ್ಕಿಂತ ಗಣನೀಯವಾಗಿ ಹೆಚ್ಚಿರುವಂತೆ ಕಾಣಿಸುತ್ತದೆ[30]. ಈ ಅಂದಾಜುಗಳು ಶಿಕ್ಷಣದಲ್ಲಿ ಸಂಪನ್ಮೂಲಗಳ ಹಂಚಿಕೆಯನ್ನು ಸಾಧ್ಯ ಮಾಡುವ ಆರ್ಥಿಕ ಬೆಳವಣಿಗೆಯ ಬಗ್ಗೆ ಏನನ್ನೂ ಹೇಳುವುದಿಲ್ಲ: ಅವುಗಳ ಪರಿಕಲ್ಪನಾತ್ಮಕ ಮತ್ತು ಪ್ರಾಯೋಗಿಕ ತಳಹದಿಗಳು ಎಲ್ಲರಿಗೂ ಗೊತ್ತಿರುವುದೇ[31]. ಪ್ರತಿಫಲದ ಪ್ರಮಾಣದ ವಿಶ್ಲೇಷಣೆಗೆ ನೀತಿ ನಿರೂಪಕರು ಮೇಲ್ನೋಟಕ್ಕೆ ಕಾಣುವಂತೆ ನೀಡುವ ಮಹತ್ವವನ್ನು ನೋಡಿದರೆ ಪ್ರಾಥಮಿಕ ಶಾಲಾ ಕಲಿಕೆಗೆ ಹಂಚಿಕೆ ಮಾಡುವ ಶೈಕ್ಷಣಿಕ ಸಂಪನ್ಮೂಲಗಳನ್ನು ಕಡಿತಗೊಳಿಸುವುದು ಬಂಡವಾಳಶಾಹಿ ದೇಶಗಳಲ್ಲಿನ ಇತ್ತೀಚಿನ ಧೋರಣೆಯಾಗಿದೆ ಎನ್ನುವ ವಾಸ್ತವಾಂಶವು ಶಾಲಾಕಲಿಕೆಯನ್ನು ಅಭಿವೃದ್ಧಿಗೆ ಅಥವಾ ಸಮಾನತೆಯನ್ನು ತರಲು ಒಂದು ಸಾಧನವನ್ನಾಗಿ ಬಳಸಲಾಗುತ್ತಿದೆ ಎನ್ನುವ ಮಾತನ್ನು ಬೆಂಬಲಿಸುವುದಿಲ್ಲ. 1960 ಮತ್ತು 1970 ರ ನಡುವೆ ಬಡ ಹಾಗೂ ಮಧ್ಯಮ ಆದಾಯದ ಬಂಡವಾಳಶಾಹಿ ದೇಶಗಳಲ್ಲಿ ಉನ್ನತ ಶಿಕ್ಷಣದ ಪ್ರವೇಶಾತಿಯು ಪ್ರಾಥಮಿಕ ಪ್ರವೇಶಾತಿಯ ದುಪ್ಪಟ್ಟಾಗಿರುವುದು ಕಂಡುಬರುತ್ತದೆ[32]. ಇದಕ್ಕೆ ಭಾರತವು ಒಂದು ಪ್ರಮುಖ ಹಾಗೂ ಸಾಮಾನ್ಯವಾದ ಉದಾಹರಣೆಯಾಗಿದೆ: ಗಂಭೀರವಾದ ನಿರುದ್ಯೋಗ, ಕಾಲೇಜು ಪದವೀಧರರಲ್ಲಿನ ಕಡಿಮೆ ಪ್ರಮಾಣದ ಪ್ರತಿಫಲ ಮತ್ತು ಪ್ರಾಥಮಿಕ ಶಾಲಾಕಲಿಕೆಗೆ ಹೆಚ್ಚು ಪ್ರತಿಫಲದ ಪ್ರಮಾಣವಿರುತ್ತದೆ ಎನ್ನುವ ಅಂದಾಜು (20%) ಇದ್ದಾಗ್ಯೂ ಕೂಡ ಯೋಜಿತ ಪ್ರಾಥಮಿಕ ಶಾಲಾ ಪ್ರವೇಶಾತಿಯ ವಿಸ್ತರಣೆಯು ಇತರ ಹಂತಗಳಿಗಿಂತ ಕಡಿಮೆಯಾಗುತ್ತಲೇ ಬರುತ್ತಿದೆ: ಮತ್ತು ಮುಟ್ಟಬೇಕಾದ ಗುರಿಯಲ್ಲಿ ಹಿನ್ನಡೆಯು ಇತರ ಹಂತಗಳಿಗಿಂತ ಪ್ರಾಥಮಿಕ ಹಂತದಲ್ಲಿ ಹೆಚ್ಚು ಪ್ರಮಾಣದಲ್ಲಿದೆ[33]. ಅದೇ ರೀತಿಯಲ್ಲಿ ಅಭಿವೃದ್ಧಿ ಅಥವಾ ಸಮಾನತೆಯನ್ನುಉತ್ತೇಜಿಸುವ ದೃಷ್ಟಿಕೋನಕ್ಕೆ ಸಂಬಂಧಿಸಿದಂತೆ ವಿವರಣೆಗೆ ಸಿಗಲಾರದ ಅಂಶವೆಂದರೆ ವಿದೇಶಿ ದಾನಿಗಳ' ಹಂಚಿಕೆಯ ಆದ್ಯತೆಗಳು. ಇದಕ್ಕೆ ಉದಾಹರಣೆಯಾಗಿ 1963 ಮತ್ತು 1974 ರ ನಡುವೆ ವಿಶ್ವ ಬ್ಯಾಂಕ್ ಪ್ರಾಥಮಿಕ ಶಿಕ್ಷಣಕ್ಕಿಂತ ಉನ್ನತ ಶಿಕ್ಷಣಕ್ಕೆ ನಾಲ್ಕು ಪಟ್ಟು ಹೆಚ್ಚು ಹಂಚಿಕೆಯನ್ನು ಮಾಡಿತ್ತು[34]. ಪ್ರಾಥಮಿಕ ಶಿಕ್ಷಣ ಯೋಜನೆಗಳಿಗೆ ವಿಶ್ವ ಬ್ಯಾಂಕಿನ ಇತ್ತೀಚಿನ ಆಸಕ್ತಿ ಸಂಪೂರ್ಣವಾಗಿ ಅನೌಪಚಾರಿಕ ಮೂಲಶಿಕ್ಷಣಕ್ಕೆ ಸಂಬಂಧಿಸಿದ್ದಾಗಿದೆ[35].

ಕೋಷ್ಟಕ 3. ಪ್ರಾಥಮಿಕ ಶಿಕ್ಷಣಕ್ಕೆ ಸಂಪನ್ಮೂಲಗಳ ಹಂಚಿಕೆ:ಆಂತರಿಕ ಹೋಲಿಕೆಗಳು

| ಅವಲಂಬಿತ ಚರಾಂಶಗಳು | ಸ್ವತಂತ್ರ/ಮುಕ್ತ ಚರಾಂಶಗಳ ಸಹಪ್ರಮಾಣ (ಟಿ -ಆವರಣದಲ್ಲಿ ಅಂಕಿಅಂಶಗಳು) | | | | ವ್ಯತ್ಯಾಸಗಳ ಚರಾಂಶಗಳು ವಿವರಣೆ: $R^2$ |
|---|---|---|---|---|---|
| | LFRAG | LFRAWE | COM | TRAD | |
| (1) PTPCH | -0.0058 | 0.0035 | | | |
| | (2.7) | (2.7) | | | 0.38 |
| (2) PTPCH | -0.0069 | 0.0020 | 0.0157 | -0.0035 | |
| | (-4.0) | (2.0) | (6.2) | (-1.9) | 0.67 |

ಟಿಪ್ಪಣಿಗಳು:

PTPCH = ಶಾಲಾ ವಯಸ್ಸಿನ ಒಟ್ಟುಸಂಖ್ಯೆಯಲ್ಲಿ ಪ್ರತಿ ಮಗುವಿಗೆ ಇರುವ ಪ್ರಾಥಮಿಕ ಶಾಲಾ ಶಿಕ್ಷಕರು.

LFRAG = ಕೃಷಿ ಕೆಲಸ ಮಾಡುತ್ತಿರುವ ಕಾರ್ಮಿಕ ಪಡೆಯ ಅಲ್ಪ ಭಾಗದ ದಾಖಲೆ.

LFRAWE =ಕೂಲಿ ಹಾಗೂ ವೇತನಕ್ಕಾಗಿ ಕೆಲಸ ಮಾಡುತ್ತಿರುವ ಕಾರ್ಮಿಕ ಪಡೆಯ ಅಲ್ಪ ಭಾಗದ ದಾಖಲೆ .

COM =ಕಮ್ಯುನಿಸ್ಟ್ ದೇಶಗಳಿಗೆ 1 ಕ್ಕೆ ಸಮನಾಗಿ ಹಾಗೂ ಇತರ ದೇಶಗಳಿಗೆ 0 ನಿಗದಿಪಡಿಸಿದ, ಕಲ್ಪಿತ ಚರಾಂಶ.

TRAD = ಸಾಂಪ್ರದಾಯಿಕ ಗಣ್ಯರಿಗೆ 1 ಕ್ಕೆ ಸಮನಾಗಿ ಹಾಗೂ ಇತರರಿಗೆ 0 ನಿಗದಿಪಡಿಸಿದ, ಕಲ್ಪಿತ ಚರಾಂಶ.

ಆರ್ಥಿಕ ರಚನೆ, ವರ್ಗ ಹಿತಾಸಕ್ತಿಗಳು, ಮತ್ತು ಶೈಕ್ಷಣಿಕ ದ್ವಿವಿಧ ಇವುಗಳ ನಡುವಿನ ಸಂಬಂಧಗಳ ಕುರಿತಂತೆ ಇರುವ ಪುರಾವೆಯನ್ನು ನಾವು ಪ್ರಾಥಮಿಕ ಶಿಕ್ಷಣಕ್ಕೆ ಎಷ್ಟು ಸಂಪನ್ಮೂಲಗಳನ್ನು ಹಂಚಿಕೆ ಮಾಡಲಾಗಿದೆ ಎನ್ನುವುದನ್ನು ದೇಶಗಳ ನಡುವಿನ ಹೋಲಿಕೆಯಲ್ಲಿ ಕಂಡುಕೊಳ್ಳಬಹುದಾಗಿದೆ. ಈ ದತ್ತಾಂಶವನ್ನು ಉಪಯೋಗಿಸಿಕೊಂಡು ಬಂಡವಾಳಶಾಹಿ ದೇಶಗಳಲ್ಲಿ ಲಭ್ಯವಿರುವ ಪ್ರಾಥಮಿಕ ಶಿಕ್ಷಣದ ಪ್ರಮಾಣವು ಬಂಡವಾಳಶಾಹಿ ಉತ್ಪಾದನಾ ವಿಧಾನಕ್ಕೂ ಮತ್ತು ಎರಡೂ ವಿಧಾನಗಳಲ್ಲಿರುವ ಪ್ರಬಲ ವರ್ಗಗಳ ನಡುವೆ ಇರುವ ಅಧಿಕಾರ ಸಂಬಂಧಕ್ಕೂ ಸಂಬಂದಿಸಿದೆ ಎಂದು ನಾನು ತೋರಿಸುತ್ತೇನೆ. ಸಾಮೂಹಿಕ ಶಿಕ್ಷಣದ ಮೇಲೆ ಬಂಡವಾಳಶಾಹಿ ವರ್ಗವು ಹೇರುವ ನಿರ್ಬಂಧಗಳನ್ನು ಸಚಿತ್ರವಾಗಿ ವಿವರಿಸಲು, ಆರ್ಥಿಕತೆಗಳ ರಚನೆಯಲ್ಲಿರುವ ಸಂಬಂಧಿತ/ಪ್ರಸಕ್ತ ಭಿನ್ನತೆಗಳನ್ನು ನಿಯಂತ್ರಣಕ್ಕೆ ತಂದ ನಂತರ ಕಮ್ಯುನಿಸ್ಟ್ ದೇಶಗಳು ಪ್ರಾಥಮಿಕ ಶಾಲಾಕಲಿಕೆಗೆ ಬಂಡವಾಳಶಾಹಿ ಅಥವಾ ಸಾಂಪ್ರದಾಯಿಕ ಗಣ್ಯರ ಪ್ರಾಧಾನ್ಯತೆ ಇರುವ ದೇಶಗಳಿಗಿಂತ ಹೆಚ್ಚು, ಗಣನೀಯ ಪ್ರಾಧಾನ್ಯತೆಯನ್ನು ನೀಡುತ್ತಾರೆ.

ನಾನು 55 ಬಡ ಹಾಗೂ ಮಧ್ಯಮ ಆದಾಯದ ಕಮ್ಯುನಿಸ್ಟ್‌ಯೇತರ ದೇಶಗಳು ಮತ್ತು ಆರು ಕಮ್ಯುನಿಸ್ಟ್ ದೇಶಗಳನ್ನು ಮಾದರಿಯಾಗಿ ಬಳಸಿದ್ದೇನೆ. ಕಮ್ಯುನಿಸ್ಟ್‌ಯೇತರ 55 ದೇಶಗಳಲ್ಲಿ ಹದಿಮೂರು ದೇಶಗಳನ್ನು ಸಾಂಪ್ರದಾಯಿಕ ಗಣ್ಯರ ಪ್ರಾಧಾನ್ಯವಿರುವವಗಳೆಂದು ವರ್ಗೀಕರಿಸಲಾಗಿದೆ[36]. ಇಲ್ಲಿ ಹಲವಾರು ಅಂಚಿನಲ್ಲಿರುವ ಪ್ರಕರಣಗಳು ಇವೆಯಾದರೂ, ಹಾಗೆ ನೋಡಿದರೆ ಯಾವೊಂದೂ ಪರಿಪೂರ್ಣ ಮಾದರಿಯಾಗಿರುವುದಿಲ್ಲ, ನಾನು ಆರಿಸಿಕೊಂಡ ಈ ಮಾದರಿ ದೇಶಗಳು ಅಧಿಕಾರ ವಿತರಣೆ ಮತ್ತು ಪ್ರಬಲ ಗುಂಪುಗಳ ಹಿತಾಸಕ್ತಿಗಳ ಸ್ಥೂಲ

ಚಿತ್ರಣವನ್ನು ಕೊಡುತ್ತವೆ ಎನ್ನುವ ಭರವಸೆ ಇದೆ. ಕಮ್ಯುನಿಸ್ಟ್‌ಯೇತರ ಮತ್ತು ಸಾಂಪ್ರದಾಯಿಕ ಗಣ್ಯ ಪ್ರಧಾನವಲ್ಲದ ದೇಶಗಳನ್ನು ಬಂಡವಾಳಶಾಹಿ ಎಂದು ವರ್ಗೀಕರಿಸಲಾಗಿದೆ.

ಮೊದಲಿಗೆ ನಾನು ಕೇವಲ ಎರಡು ಆರ್ಥಿಕ ರಚನೆಗಳ - ಕೃಷಿ, ಕೂಲಿ ಹಾಗೂ ವೇತನಕ್ಕಾಗಿ ಕೆಲಸ ಮಾಡುತ್ತಿರುವ - ಅಲ್ಪ ಅಂಶದ ಪ್ರಾತಿನಿಧಿಕ ಶ್ರಮಿಕ ಪಡೆಯನ್ನು ಚರಾಂಶಗಳನ್ನು ಮಾದರಿಯಾಗಿ ತೆಗೆದುಕೊಂಡಿರುವ ಎಲ್ಲ 61 ದೇಶಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಹಂಚಿಕೆಯಾಗಿರುವ ಸಂಪನ್ಮೂಲಗಳ ಪ್ರಮಾಣ ಎಷ್ಟು ಎನ್ನುವುದರ ಬಗ್ಗೆ ಭವಿಷ್ಯ ನುಡಿಯಬೇಕಿದೆ. ಕೋಷ್ಟಕ 3 ರಲ್ಲಿರುವ 1 ಸಮೀಕರಣವು ಬಂಡವಾಳಶಾಹಿ ವಿಧಾನದ ಗಾತ್ರ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಹಂಚಿಕೆಯಾಗಿರುವ ಸಂಪನ್ಮೂಲಗಳ ನಡುವಿನ ಬಲವಾದ ಸಂಬಂಧವನ್ನು ಸಚಿತ್ರವಾಗಿ ತೋರಿಸುತ್ತದೆ. ಪ್ರಭುತ್ವದ ವರ್ಗ ಸ್ವರೂಪವನ್ನು ಗುರುತಿಸಲು ನಾನು ಸಾಂಪ್ರದಾಯಿಕ ಹಾಗೂ ಕಮ್ಯುನಿಸ್ಟ್ ದೇಶಗಳ ಭಿನ್ನತೆಯನ್ನು ಗುರುತಿಸಲು ಅದೇ ಕಲ್ಪಿತ ಚರಾಂಶಗಳನ್ನು ಬಳಸಿಕೊಂಡು ಪುನರಂದಾಜಿಸಿದ್ದೇನೆ (ಕೋಷ್ಟಕ 3ರಲ್ಲಿ ಸಮೀಕರಣ (2)). ಈ ವರ್ಗ ಶಕ್ತಿಯ ಚರಾಂಶಗಳ ಸೇರ್ಪಡುವಿಕೆಯು ಸಮೀಕರಣದ ವಿವರಣಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಪ್ರಭುತ್ವದಲ್ಲಿ ಪ್ರಧಾನ ಸ್ಥಾನವನ್ನು ಪಡೆದಿರುವ ವರ್ಗವು ಸಮಾಜದ ಆರ್ಥಿಕ ರಚನೆಯ ನೇರವಾದ ಪ್ರಭಾವವನ್ನೂ ಮೀರಿ ಸಂಪನ್ಮೂಲಗಳ ಹಂಚಿಕೆಯನ್ನು ಪ್ರಭಾವಿಸುತ್ತದೆ ಎನ್ನುವುದನ್ನು ಇದು ಸೂಚಿಸುತ್ತದೆ. ವರ್ಗಶಕ್ತಿಯ ಚರಾಂಶಗಳ ಸೂಚನೆಗಳು ನಿರೀಕ್ಷಿಸಿದಂತೆಯೆ ಇವೆ ಮತ್ತು ಸಹಪ್ರಮಾಣಗಳು ಸಂಖ್ಯೆಯಲ್ಲಿಯೂ ಹೆಚ್ಚಿವೆ ಮತ್ತು ಅಂಕಿಅಂಶಗಳಲ್ಲಿಯೂ ಮಹತ್ವದ್ದಾಗಿವೆ. ಆರ್ಥಿಕ ರಚನೆಯಲ್ಲಿರುವ ವ್ಯತ್ಯಾಸವನ್ನು ಪರಿಗಣನೆಗೆ ತೆಗೆದುಕೊಂಡರೂ ಕೂಡ ಮಾದರಿಯಲ್ಲಿರುವ ಕಮ್ಯುನಿಸ್ಟ್ ದೇಶಗಳು ಸಂಪೂರ್ಣ ಮಾದರಿಯ ಮಧ್ಯಮ ಸ್ಥಿತಿಗಿಂತ 91% ಹೆಚ್ಚು ಸಂಪನ್ಮೂಲಗಳನ್ನು ಪ್ರಾಥಮಿಕ ಶಿಕ್ಷಣಕ್ಕೆ ಹಂಚಿಕೆ ಮಾಡುತ್ತವೆ[37]. ಅದೇ ರೀತಿಯಲ್ಲಿ ಸಾಂಪ್ರದಾಯಿಕ ಗಣ್ಯರ ಪ್ರಾಧಾನ್ಯವಿರುವ ದೇಶಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಕಡಿಮೆ ಸಂಪನ್ಮೂಲಗಳನ್ನು ಹಂಚಿಕೆ ಮಾಡಲಾಗಿದೆ; ತೆಗೆದುಕೊಂಡಿರುವ ಸಂಪೂರ್ಣ ಮಾದರಿಯಲ್ಲಿನ ಮಾದರಿಯ ಮಧ್ಯಮ ಸ್ಥಿತಿಯ ಹಂಚಿಕೆಯ ವಿನ್ಯಾಸವನ್ನು ಬಿಟ್ಟು ನೇತ್ಯಾತ್ಮಕ ಮಾರ್ಗವನ್ನು ಹಿಡಿದಿರುವ ಪ್ರಮಾಣ 21% (ನಿರುಪಾಧಿಕ ಮೌಲ್ಯದಲ್ಲಿ) ಆಗಿದೆ.

ಸಾಂಪ್ರದಾಯಿಕ ಗಣ್ಯರಿಗೆ ಸಂಬಂಧಿಸಿದಂತೆ ರಾಜಕೀಯ ಚರಾಂಶಗಳ ಅಂದಾಜು ಸಹಪ್ರಮಾಣವು ವರ್ಗಶಕ್ತಿಯ ನಿಜವಾದ ಪರಿಣಾಮವನ್ನು ಅವಗಣನೆ ಮಾಡುತ್ತದೆ, ಏಕೆಂದರೆ ದೊಡ್ಡ ಕೃಷಿ ವಲಯವನ್ನು ಕಾಪಾಡಿಕೊಂಡು ಬರುವುದು ಮತ್ತು ಆಧುನಿಕ ವೇತನ ಗಳಿಕೆಯ ವಲಯದ ಮಿತಿ ಈ ಗಣ್ಯರ ಆರ್ಥಿಕ ತಂತ್ರದ ಒಂದು ಭಾಗವಾಗಿರುವ ಹಾಗೆ ಕಾಣಿಸುತ್ತದೆ. ಅವರ ಕೆಲವು ಅಧಿಕಾರಗಳನ್ನು ಈ ಅಂದಾಜಿನಲ್ಲಿ ಸ್ಥಿರವಾಗಿರುವ ಎರಡು ಆರ್ಥಿಕ ರಚನೆಯ ಚರಾಂಶಗಳಿಂದ ಅಳೆಯಲಾಗುತ್ತದೆ. ಹಾಗಾಗಿ, ಹೆಚ್ಚು ಸೂಕ್ತವಾದ ವಿಶ್ಲೇಷಣೆಯಲ್ಲಿ ರಾಜಕೀಯ ಆಧಿಕಾರದ ಚರಾಂಶಗಳಾಗಲಿ ಆರ್ಥಿಕ ಚರಾಂಶಗಳಾಗಲಿ ಯಾವುದೂ ಕೂಡ ಬಹಿರ್ಜಾತವಾಗಿರುವುದಿಲ್ಲ.

61 ದೇಶಗಳ ಈ ಮಾದರಿಯ ಈ ಪುರಾವೆಯು ಶಿಕ್ಷಣಕ್ಕೆ ಸಂಪನ್ಮೂಲಗಳನ್ನು ಹಂಚಿಕೆ ಮಾಡುವ ಶಕ್ತಿಗಳ ಕುರಿತ ನನ್ನ ವ್ಯಾಖ್ಯಾನಕ್ಕೆ ಪೂರಕವಾಗಿದೆ. ಹಾಗಿದ್ದೂ ಪ್ರಾಯೋಗಿಕ ವಿಶ್ಲೇಷಣೆಯಲ್ಲಿ ಶೈಕ್ಷಣಿಕ ಸಂಪನ್ಮೂಲ ಹಂಚಿಕೆಯ ಮುಖ್ಯ ಪ್ರಭಾವಗಳನ್ನು ಹೊರಗಿಡಲಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ಸ್ಥಿರ ವಿಶ್ಲೇಷಣೆಯ ಅಳವಡಿಕೆ ಮತ್ತು ಅಡ್ಡ ವಿಭಾಗಗಳ ದತ್ತಾಂಶಗಳ ಬಳಕೆ ಯಾವುದೇ ಒಂದು ನಿರ್ದಿಷ್ಟ ಸಮಯದಲ್ಲಿ ಏಕ ಗುಂಪು ಅಥವಾ ವರ್ಗವು ಪ್ರಧಾನವಾಗಿರುತ್ತದೆ ಎನ್ನುವ ಊಹೆ ಇವೆಲ್ಲವೂ ಶೈಕ್ಷಣಿಕ ವ್ಯವಸ್ಥೆಯ ಐತಿಹಾಸಿಕ ಬೆಳವಣಿಗೆಯಿಂದ ಗಮನವನ್ನು ಬೇರೆಡೆಗೆ ಸೆಳೆಯುತ್ತವೆ.

ವರ್ಗ ಗಡಿಗಳ ವಿಭಜನೆಯು, ಸ್ಥಿರ ವಿಶ್ಲೇಷಣೆಯಲ್ಲೂ ಕೂಡ ಎಂದಿಗೂ ಕರಾರುವಕ್ಕಾಗಿರುವುದಿಲ್ಲ, ಅದಲ್ಲದೆ ವರ್ಗ ರಚನೆಯು ಬದಲಾಗುತ್ತಲೆ ಇರುತ್ತದೆ. ಈ ಮೇಲಿನ ವಿಶ್ಲೇಷಣೆಯಲ್ಲಿ ಎರಡು ಪರಸ್ಪರ ಸ್ಪರ್ಧಿಗಳಾದ ಉತ್ಪಾದನಾ ವಿಧಾನಗಳಲ್ಲಿ - ಬಂಡವಾಳಶಾಹಿ ಮತ್ತು ಸಾಂಪ್ರದಾಯಿಕ - ಪ್ರತಿ ವಿಧಾನದಲ್ಲಿಯೂ ಪ್ರಬಲ ವರ್ಗಗಳ ನಡುವೆ ಸ್ಪರ್ದೆಯನ್ನು ಹುಟ್ಟುಹಾಕುತ್ತದೆ. ಅಧಿಕಾರ ಮತ್ತು ಸಂಪತ್ತಿನ ಅಂಚಿನಲ್ಲಿರುವ ಗುಂಪುಗಳು ಉತ್ತಮ ಪದವಿಸ್ಥಾನಗಳಿಗೆ ಪ್ರವೇಶವನ್ನು ಬಯಸುತ್ತಿರುತ್ತವೆ. ಬಡ ಹಾಗೂ ಹೊರಗುಳಿದ ಗುಂಪುಗಳು ಹೆಚ್ಚು ಆದಾಯ ಮತ್ತು ರಾಜಕೀಯ ಪ್ರಭಾವವನ್ನು ಬಯಸುತ್ತವೆ. ಒಂದು ನಿರ್ದಿಷ್ಟ ವರ್ಗದ ಊಹಾ ಯಜಮಾನ್ಯತೆಯನ್ನು ಆಧರಿಸಿದ ಒಂದು ಅರ್ಥಮಾಪನಶಾಸ್ತ್ರೀಯ (ಎಕನೋಮ್ಯಾಟ್ರಿಕ್ಸ್) ವಿಶ್ಲೇಷಣೆಯು ಶಿಕ್ಷಣ ನೀತಿಯ ವರ್ಗಗಳ ನಡುವಿನ ಬಗೆಹರಿಯದ ಸಂಘರ್ಷದ ಕೆಲವು ಅಂಶಗಳನ್ನು ಗುರುತಿಸಲು ವಿಫಲವಾಗುತ್ತದೆ. ಅದಲ್ಲದೆ, ಅದು ಹಟಮಾರಿ ಗುಂಪುಗಳನ್ನು ಒಳಹಾಕಿಕೊಳ್ಳುವ ಮತ್ತು ಅಧಿಕಾರದಲ್ಲಿರುವ ವರ್ಗಕ್ಕೆ ಅವುಗಳ ವಿಧೇಯತೆಯನ್ನು ಕೊಂಡುಕೊಳ್ಳುವ ಶೈಕ್ಷಣಿಕ ನೀತಿಯ ಅಂಶಗಳನ್ನೂ ಕೂಡ ಹೊರಗಿಡುತ್ತದೆ. ಉದಹಾರಣೆಗೆ ಹಲವಾರು ಬಡದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಪ್ರಾಥಮಿಕ ಶಿಕ್ಷಣಕ್ಕಿಂತ ಉನ್ನತ ಶಿಕ್ಷಣಕ್ಕೆ 'ವಿಪರೀತ-ತೊಡಗಿಸುವಿಕೆ'ಯು ಗಣ್ಯರ ಆದಾಯವನ್ನು ಗರಿಷ್ಠಗೊಳಿಸಲು ಮಾಡಿದ ಪ್ರಜ್ಞಾಪೂರ್ವಕವಾದ ಯೋಜನೆಯಾಗಿರುವುದಿಲ್ಲ. ಬದಲಿಗೆ ಅದು ವಿಶ್ವವಿದ್ಯಾನಿಲಯಗಳ ವಿಸ್ತರಣೆಯಿಂದ ಲಾಭ ಪಡೆದುಕೊಳ್ಳುವ ಕುಟುಂಬಗಳು ರಾಜಕೀಯವಾಗಿ ಗಣ್ಯರ ಹೊರತಾಗಿ ಅತ್ಯಂತ ಶಕ್ತಿವಂತ ಗುಂಪುಗಳಾಗಿರುವ ಕಾರಣದಿಂದಾಗಿರುತ್ತದೆ[38]. ಈ ಪ್ರಕರಣದಲ್ಲಿ, ವಿಶ್ವದ್ಯಾನಿಲಯದ ವಿಸ್ತರಣೆಯು ಸ್ಥಿರತೆಯ ದೃಷ್ಟಿಯಿಂದ ಅವರಿಗೆ ನೀಡಿದ ವಿನಾಯತಿಯಾಗಿರುತ್ತದೆ. ಪ್ರಾಥಮಿಕ ಶಿಕ್ಷಣ ಅವಕಾಶವನ್ನು ನಿರಾಕರಿಸಲ್ಪಟ್ಟ ಕುಟುಂಬಗಳ ರಾಜಕೀಯ ಪ್ರಭಾವವು ಸಾಮಾನ್ಯವಾಗಿ ಕನಿಷ್ಠವಾಗಿದ್ದರೂ ಕೂಡ ಅದೇ ರೀತಿಯ ಒತ್ತಡಗಳು ಶಾಲಾ ವ್ಯವಸ್ಥೆಯ ಎಲ್ಲ ಹಂತದಲ್ಲೂ ಕಂಡುಬರುತ್ತವೆ.

ಒಂದು ಸ್ಥಿರ ಅರ್ಥಮಾಪನಶಾಸ್ತ್ರೀಯ ವಿಶ್ಲೇಷಣೆಯು ಕೂಡ ಪ್ರಬಲ ಗುಂಪುಗಳ ಶೈಕ್ಷಣಿಕ ತಂತ್ರಗಳು ಅಗತ್ಯವಾಗಿ ಯಶಸ್ವಿಯಾಗುತ್ತವೆ ಎನ್ನುವ ಅನಿಸಿಕೆಯನ್ನು ಹುಟ್ಟುಹಾಕುತ್ತವೆ. ಆದರೆ ಇದು ಹಾಗಾಗಬೇಕೆಂದೇನೂ ಇಲ್ಲ ಎಂದು ತೋರಿಸಲು ಒಂದು ಉದಾಹರಣೆ ಸಾಕು. ಹೊರಗಿರಿಸಲ್ಪಟ್ಟ ಗುಂಪುಗಳನ್ನು ಕೊಂಡುಕೊಳ್ಳಲು ಶೈಕ್ಷಣಿಕ ವ್ಯವಸ್ಥೆಯನ್ನು ಬಳಸಿಕೊಳ್ಳುವಿಕೆಯು, ಒಂದು ನಿರ್ದಿಷ್ಟವಾದ ಶಾಲಾಕಲಿಕೆಯ ಹಂತದ ವಿಸ್ತರಣೆಯು, ಉದ್ಯೋಗದಾತರಿಂದ ಶಿಕ್ಷಿತ ಕಾರ್ಮಿಕರಿಗೆ ಇರುವ ಬೇಡಿಕೆಯನ್ನು ಪರಿಗಣಿಸದೆ ಮುಂದುವರೆದರೆ ಅನಿರೀಕ್ಷಿತ ಪರಿಣಾಮಗಳನ್ನು ಉಂಟುಮಾಡಬಹುದು. ನಿರಂತರವಾಗಿ ಮುಂದುವರೆದ ದಾಖಲಾತಿಯು ಬಂಡವಾಳಶಾಹಿ ವಿಧಾನಕ್ಕೆ ಪ್ರವೇಶ ಪಡೆಯುವುದು ಹೆಚ್ಚು ದುಬಾರಿಯಾಗುತ್ತಾ ಹೋಗಬಹುದು: ಮೊದಲಿಗೆ ಅದಕ್ಕೆ ಬೇಕಾಗುವುದು ಅಕ್ಷರಜ್ಞಾನ, ಆನಂತರ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸ, ಆಮೇಲೆ ಸೆಕೆಂಡರಿ ಶಾಲೆಯ ಡಿಪ್ಲೊಮಾ. ವಾಸ್ತವದಲ್ಲಿ ಶಿಫಾರಸ್ಸು ಪತ್ರಗಳ ಈ ಹೆಚ್ಚಳಕ್ಕೆ ಶಾಲವ್ಯವಸ್ಥೆಯ ಆಂತರಿಕ ವೈರುಧ್ಯಗಳೇ ಭಾಗಶಃ ಕಾರಣವಾಗಿರುತ್ತವೆ. ಏಕೆಂದರೆ, ಶೈಕ್ಷಣಿಕ ವ್ಯವಸ್ಥೆಯ ವಿಸ್ತರಣೆಗೆ ಇರುವ ಜನಪ್ರಿಯ ಬೇಡಿಕೆಗಳನ್ನು ನಿರಂತರವಾಗಿ ತಡೆಹಿಡಿಯಲು ಸಾಧ್ಯವಾಗದಿರುವುದರಿಂದ, ಬಂಡವಾಳಶಾಹಿ ವಿಧಾನದಲ್ಲಿ ಇರುವ ಉದ್ಯೋಗಕ್ಕಿಂತ ಹೆಚ್ಚು ಶಿಕ್ಷಿತರನ್ನು ಶಾಲಾ ವ್ಯವಸ್ಥೆಗಳು ಉತ್ಪಾದಿಸುತ್ತವೆ. ಶಿಕ್ಷಿತ ಕಾರ್ಮಿಕರ ಈ ಬಗೆಯ ಉಬ್ಬರದ ಸರಬರಾಜು ಉದ್ಯೋಗಕ್ಕೆ ಇರುವ ಅರ್ಹತೆಗಳನ್ನು ಮೇಲಕ್ಕೇರಿಸುತ್ತದೆ. ಇದರ ಪರಿಣಾಮವಾಗಿ, ನಂತರದ ಶೈಕ್ಷಣಕ ಹಂತಕ್ಕೆ ಪ್ರವೇಶ ಪಡೆಯಲು ಹತಾಶೆಯ ನಿರೀಕ್ಷೆಗಳನ್ನು ಮತ್ತು ಬೇಡಿಕೆಗಳನ್ನು ಇದು ಹುಟ್ಟುಹಾಕುತ್ತದೆ. ಹೀಗೆ ಇದು ಮುಂದುವರೆಯುತ್ತದೆ.

ನಂತರದ ಹಂತದ ವಿಸ್ತರಣೆಯು ಈ ಪದವೀಧರರನ್ನು ಕಾರ್ಮಿಕ ಮಾರಕಟ್ಟೆಯಿಂದ ಹೊರಗಿಡುತ್ತದೆ ಮತ್ತು ಆನಂತರ ಅವರು ಉನ್ನತ ಹಂತದಲ್ಲಿ ಪದವಿಯನ್ನು ಗಳಿಸಿದಾಗ ಅದೇ ಸಮಸ್ಯೆ ಮರುಕಳಿಸುವಂತೆ ಮಾಡಲು ಅವರ ಅತೃಪ್ತಿಯನ್ನು ಮೊಂಡುಗೊಳಿಸುತ್ತದೆ. ಎಲ್ಲಿಯವರೆಗೆ ನಗರದ ಬಿಳಿ ಕಾಲರಿನ ಕಾರ್ಮಿಕ ಪಡೆ ರಾಜಕೀಯ ಶಕ್ತಿಯು ಧಾರಾಳ ವೇತನ ನಿಯಮಗಳನ್ನು ರೂಪಿಸುತ್ತದೆಯೊ ಉದ್ಯೋಗದಲ್ಲಿನ ತೃಪ್ತಿ ಮತ್ತು ಶ್ರಮದ ನಿಜವಾದ ಕೊರತೆಗೆ ಸಂಬಂಧವೆ ಇರದಂತೆ ಉದ್ಯೋಗ ಪಡೆಯಲು ಬೇಕಾದ ಶಿಫಾರಸು ಪತ್ರಗಳು ಸಿಗುವಂತೆ ಮಾಡಲಾಗುತ್ತದೊ ಅಲ್ಲಿಯವರೆಗೆ ಉನ್ನತ ಶಿಕ್ಷಣದ ಅತಿಯಾದ ವಿಸ್ತರಣೆಗೆ ಜನಪ್ರಿಯ ಬೇಡಿಕೆಗಳು ಕುಮ್ಮಕ್ಕು ಕೊಡುತ್ತಲೆ ಇರುತ್ತವೆ.

### 5. ಉಪಸಂಹಾರ: ಶಿಕ್ಷಣ ನೀತಿಯ ಮಿತಿಗಳು

ಈ ಕೆಳಗಿನ ಮಾರ್ಗಗಳ ಮೂಲಕ ಶಾಲಾ ವ್ಯವಸ್ಥೆಯು ಬಂಡವಾಳಶಾಹಿ ಬೆಳವಣಿಗೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ ಎಂದು ನಾನು ಪ್ರತಿಪಾದಿಸಿದ್ದೇನೆ: (ಅ) ಸಾಂಪ್ರದಾಯಿಕ ಹಾಗೂ ಬಂಡವಾಳಶಾಹಿ ಉತ್ಪಾದನಾ ವಿಧಾನಗಳ ನಡುವಿನ ಕಾರ್ಮಿಕರ ಹರಿಯುವಿಕೆಯನ್ನು ನಿಯಂತ್ರಿಸುವುದು, (ಆ) ಬಂಡವಾಳಶಾಹಿ ವಿಧಾನದಲ್ಲಿ ಉತ್ಪಾದನಾ ಸಾಮರ್ಥ್ಯವನ್ನು ವೃದ್ದಿಸುವುದು (ಇ) ದೊಡ್ಡ ಪ್ರಮಾಣದ ವರ್ಗ ಪ್ರಜ್ಞೆಯುಳ್ಳ ಕಾರ್ಮಿಕ ವರ್ಗ ಅಥವಾ ಕೃಷಿ ಕಾರ್ಮಿಕರು ಬೆಳೆಯದಂತೆ ಅಥವಾ ಹೊಂದಾಣಿಕೆಯಾಗದಂತೆ ನೋಡಿಕೊಳ್ಳುವುದು ಮತ್ತು (ಈ) ಸಾಂಪ್ರದಾಯಿಕ ಗಣ್ಯರ ಸೈದ್ಧಾಂತಿಕ ಮತ್ತು ರಾಜಕೀಯ ಯಾಜಮಾನಿಕೆಯನ್ನು ಅವಗಣಿಸುವುದು. ಬಹಳಷ್ಟು ಬಡ ದೇಶಗಳಲ್ಲಾಗುವಂತೆ ಎಲ್ಲಿ ಪ್ರಭುತ್ವವು ಮೂಲಭೂತವಾಗಿ ಬಂಡವಾಳಶಾಹಿ ಹಿತಾಸಕ್ತಿಯನ್ನು ರಕ್ಷಿಸುವುದೊ ಅಲ್ಲಿ - ಸಮಾನತೆ ಅಥವಾ ತಲಾ ಆದಾಯದ ಅಭಿವೃದ್ದಿಯ ಪ್ರಮಾಣವನ್ನು ಗರಿಷ್ಟಗೊಳಿಸುವ ಬದ್ದತೆಯ ಬದಲಾಗಿ - ಶಿಕ್ಷಣ ನೀತಿಯಲ್ಲಿ ಈ ಉದ್ದೇಶಗಳ ಪ್ರಾಬಲ್ಯ ಪ್ರಧಾನವಾಗಿರುತ್ತದೆ. ಹಾಗಾಗಿ ಸಮಾನತಾ ಅಥವಾ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಶಿಕ್ಷಣವು, ವರ್ಗ ರಚನೆಯನ್ನು ಪುನರುತ್ಪಾದಿಸಬೇಕಾದ ಒತ್ತಡಗಳು, ಕ್ರೂಢೀಕರಣ ಪ್ರಕ್ರಿಯೆಯ ತರ್ಕ ಮತ್ತು ಪ್ರಭುತ್ವದ ಬಂಡವಾಳಶಾಹಿ ಪ್ರಾಬಲ್ಯದ ನಡುವೆ ಮಿತಿ ಎದುರಿಸುತ್ತದೆ. ಹೆಚ್ಚು ಸಮೃದ್ದಿಯಾದ ಮತ್ತು ವಿಶಾಲವಾಗಿ ಹಂಚಿಕೆಯಾಗುವ ಆರ್ಥಿಕ ಲಾಭಗಳಿಗೆ ಇರುವ ಮುಲಭೂತ ತೊಡಕು ಅಧಿಕಾರ ವಿತರಣೆಯೇ ಹೊರತು ಮಾನವ ಬಂಡವಾಳದ ವಿತರಣೆಯಲ್ಲ.

ಬಂಡವಾಳಶಾಹಿ ಸಾಮಾಜಿಕ ರಚನೆಯ ವರ್ಗ ರಚನೆ ಮತ್ತು ಅಸಮಾನ ಅಭಿವೃದ್ದಿಯ ಸವಾಲನ್ನು ಎದುರಿಸಲು ಒಂದು ಜನಪ್ರಿಯ ಚಳುವಳಿಯ ಭಾಗವಾಗಿ ಸಾಮಾಜಿಕ ಸಮಾನತೆಯನ್ನು ಹೆಚ್ಚಿಸಲು ಅಥವಾ ಹೆಚ್ಚು ವೈಚಾರಿಕ ಬೆಳವಣಿಗೆಯ ಪ್ರಕ್ರಿಯೆಗೆ ಕೊಡುಗೆಯನ್ನು ಸಲ್ಲಿಸಲು ಶೈಕ್ಷಣಿಕ ಕಾರ್ಯಕ್ರಮವನ್ನು ಬಳಸಬಹುದಾಗಿದೆ. ಬ್ರೆಜಿಲ್ ಈಶಾನ್ಯದಲ್ಲಿ ಪೌಲೊ ಫ್ರೆಯಿರೆಯ ರಾಜಕೀಯಕರಣಗೊಂಡ ಸಾಕ್ಷರತಾ ತರಬೇತಿ ಮತ್ತು ಮಾವೊತ್ಸೆ ತುಂಗ್‌ನ 1942-44 ರ 'ದುರಸ್ತಿ ಚಳುವಳಿ' ತಕ್ಷಣ ಮನಸಿಗೆ ಬರುತ್ತದೆ. ಆದರೆ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ದ ನಡೆಯಬೇಕಾದ ಯಾವುದೇ ದಂಗೆಯ ಗೈರು ಹಾಜರಿಯಲ್ಲಿ ಈ ಸಂಭಾವ್ಯ ಕಾರ್ಯಕ್ರಮಗಳನ್ನು ಚರ್ಚಿಸುವುದು ಸುಮ್ಮನೆ ಕುಳಿತು ಕನಸು ಕಾಣುವುದಕ್ಕಿಂತ ಕೆಟ್ಟದ್ದು. ಇದು ಏನನ್ನೂ ಪಡೆಯಲಾಗದ ಆದರೆ ಪ್ರಗತಿಯ ಭರವಸೆಯನ್ನು ಹುಟ್ಟಿಸಲು ಬಂಡವಾಳಶಾಹಿಗೆ ಸಮಯವನ್ನು ಕೊಡುವ ಮತ್ತು ಅಸಮಾನತೆ ಹಾಗೂ ಆರ್ಥಿಕ

ಅವೈಚಾರಿಕತೆಯ ಬಂಡವಾಳಶಾಹಿ ಬೇರುಗಳನ್ನು ಮುಚ್ಚಿಡಲು ಮಾಡುವ ಒಂದು ಉಪಶಮನಕಾರಿ ಸಿದ್ಧಾಂತವೇ ಹೊರತು ಮತ್ತೇನೂ ಅಲ್ಲ.

***

## ಟಿಪ್ಪಣಿಗಳು

1. ವಿಶ್ವ ಬ್ಯಾಂಕ್ (1974) ಪು. i 13

2. ಬಡದೇಶಗಳ ಶೈಕ್ಷಣಿಕ ಸಂಪನ್ಮೂಲಗಳ ಹಂಚಿಕೆಯ ಗರಿಷ್ಟ ಪ್ರಗತಿಯ ಮಾದರಿಗಳು, ನನಗೆ ತಿಳಿದಿರುವಂತೆ ಯಾವುದೇ ಅಪವಾದವಿಲ್ಲದೆ, ವಾಸ್ತವ ಹಾಗೂ ಅಭಿವೃದ್ಧಿಗೆ ಸೂಕ್ತವಾದ ಶೈಕ್ಷಣಿಕ ಯೋಜನೆಗಳ ನಡುವಿನ ಅಗಾಧ ವ್ಯತ್ಯಾಸವನ್ನು ತೋರಿಸುತ್ತವೆ. ಉದಾಹರಣೆಗೆ ನೋಡಿ, ಬೌಲ್ಸ್ (1969). ಅಸಮಾನತೆಗೆ ಶಾಲಾಕಲಿಕೆಯ ಕೊಡುಗೆಯ ಕುರಿತು ಟುನಿಷಿಯಾದ ವಿಶ್ವ ಬ್ಯಾಂಕ್ ಅಧ್ಯಯನ (1974ಎ) ಮತ್ತು ಪಾಕಿಸ್ತಾನ (1977),ಭಾರತ ಹಾಗೂ ಕೊಲಂಬಿಯಾದ ಬಗ್ಗೆ ದಾಸ್‌ಗುಪ್ತಾ ಅವರ ಅಧ್ಯಯನ (1974) ಗಳು ಸೂಚಿಸುತ್ತವೆ.

3. ನೋಡಿ: ಕೂಂಬ್ಸ್ (1968) ಮತ್ತು (1974)

4. ಸಾಂಪ್ರದಾಯಿಕ ಆರ್ಥಿಕತೆಯ ಈ ಅಂಶವನ್ನು ಅಬ್ಬಾ ಲರ್ನರ್‌ರವರು ಚೆನ್ನಾಗಿ ಹಿಡಿದಿದ್ದಾರೆ: "ಒಂದು ಆರ್ಥಿಕ ವ್ಯವಹಾರವು ಬಗೆಹರಿಸಲಾದ ರಾಜಕೀಯ ಸಮಸ್ಯೆಯಾಗಿದೆ. ಅರ್ಥಶಾಸ್ತ್ರವು ಬಗೆಹರಿಸಲಾದ ರಾಜಕೀಯ ಸಮಸ್ಯೆಯನ್ನು ತನ್ನ ಕ್ಷೇತ್ರವನ್ನಾಗಿ ಮಾಡಿಕೊಳ್ಳುವ ಮೂಲಕ ಸಮಾಜ ವಿಜ್ಞಾನಗಳ ರಾಣಿ ಎನ್ನುವ ಹೆಸರನ್ನು ಗಳಿಸಿದೆ' (1972 ಪು.259). ಇದನ್ನೂ ನೋಡಿ ಗಾಲ್‌ಬ್ರಿಯಾತ್ (1973).

5. ಸಾಮ್ಯುಯಲ್‌ಸನ್ (1957), ಪು. 894.

6. ಈ ಆಶಾದಾಯಕ ನಿಲುವು ಬೇರೆಲ್ಲಿಗಿಂತಲೂ ಹೆಚ್ಚಾಗಿ ವಿಶ್ವ ಬ್ಯಾಂಕ್‌ನ ಅಂತಾರಾಷ್ಟ್ರೀಯ ನಿಯೋಗಿಗಳು ಮತ್ತು ಅಮೇರಿಕಾದ ಅಂತಾರಾಷ್ಟ್ರೀಯ ಅಭಿವೃದ್ಧಿಯ ನಿಯೋಗಿಗಳ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ದಾಖಲೆಗಳಲ್ಲಿ ಕಾಣಿಸಕೊಳ್ಳುತ್ತದೆ. ನೋಡಿ: ಚೇನಿರಿ ಮತ್ತು ಇತರರು (1974).

7. ಬೆಕರ್ ಅವರು, ಅವನ ದೃಷ್ಟಿಕೋನದ ಸೈದ್ಧಾಂತಿಕ ಧ್ವನಿಯನ್ನು (1967) ಪ್ರಕಟಿಸಿದ್ದಾರೆ. ದಾಸಗುಪ್ತ ಅವರಅಧ್ಯಯನವು (1974) ಹೆಚ್ಚು ಅಭಿವೃದ್ಧಿ ಹೊಂದಿದ ಪ್ರಾಯೋಗಿಕ ಅಳವಡಿಕೆಯನ್ನು ಪ್ರತಿನಿಧಿಸುತ್ತದೆ. ಅದರ ವಿಮರ್ಶೆಗೆ ನೋಡಿ: ಬೌಲ್ಸ್ ಮತ್ತು ಗಿಂಟಿಸ್ (1975) ಮತ್ತು ಥರೊ (1975).

8. ಮಿಲಿಬಾಂಡ್ (1969), ಕೊಲ್ಕೊ (1963), ಮತ್ತು ವೀನ್‌ಸ್ಟೀನ್ (1968) ಈ ಸಾಹಿತ್ಯದ ಪ್ರತಿನಿಧಿಗಳಾಗಿದ್ದಾರೆ.

9. ನಿರ್ದಿಷ್ಟವಾಗಿ ಶಾಲಾಕಲಿಕೆಯ ಕುರಿತು, ನೋಡಿ ಬೌಲ್ಸ್ ಮತ್ತು ಗಿಂಟಿಸ್ (1976),ಕಾಟ್ಜ್ (1968), ಸೈಮನ್ (1960), ಬೌದೆಲೊಟ್ ಮತ್ತು ಎಸ್ಟಬ್ಲೆಟ್ (1973) ಕ್ವಿಕ್ (1975), ಜಿಂಬ್ಲಿಸ್ಟ್ (1973) ಟ್ಯಾಕ್ 1974), ಕಾರ್ನಾಯ್ (1974).

10. ಪ್ರಭುತ್ವವನ್ನು ಕುರಿತ ಮಾರ್ಕ್ಸಿಸ್ಟ್ ಸಿದ್ಧಾಂತದಂತಹ ಹಲವಷ್ಟು ವಿಷಯಗಳನ್ನು ಲಿನಿನ್ (1932), ಆಲ್ತುಸರ್ (1971), ಪೌಲಾಂಜಾಸ್ (1968), ಮತ್ತು ಮಿಲಿಬಾಂಡ್ (1969) ಅವರು ಅಬಿವೃದ್ಧಿಪಡಿಸಿದ್ದಾರೆ.

11. ಮಾರ್ಕ್ಸ್ ಮತ್ತು ಎಂಗೆಲ್ಸ್ (1972), ಪು. 337.

12. ಬಂಡವಾಳಶಾಹಿ ಆರ್ಥಿಕತೆಯ ಆದ್ಯ ಲಕ್ಷಣಗಳನ್ನು ದಾಬ್ (1947), ಅಧ್ಯಾಯ 1 ರಲ್ಲಿ ಲಕ್ಷಣೀಕರಿಸಿದ್ದಾನೆ.

13. ಪೂರ್ವ ಬಂಡವಾಳಶಾಹಿ ಉತ್ಪಾದನಾ ವಿಧಾನಕ್ಕೆ ನೋಡಿ: ಮಾರ್ಕ್ಸ್ (1963), ಟೆರೆ (1972), ಮತ್ತು ಹಿಂಡ್ನೆಸ್ ಮತ್ತು ಹರ್ಸ್ಟ್ (1975).

14. ಕೂಲಿ ಕಾರ್ಮಿಕ ವ್ಯವಸ್ಥೆಯು ಕುಟುಂಬದ ಫಲವತ್ತತೆಯ ನಿರ್ಣಯದ ಪ್ರಕ್ರಿಯೆಯನ್ನು ಅದರ ಮಾಲಿಕತ್ವದ ಭೂಮಿ ಹಾಗೂ ಇತರ ಸಂಪನ್ಮೂಲಗಳ ಮಿತಿಯಿಂದ (ಹಾಗಾಗಿ ಇಳಿಮುಖ ಪ್ರತಿಫಲಕ್ಕಾಗಿ) ಪರಿಣಾಮಕಾರಿಯಾಗಿ ದೂರ ಮಾಡುವ ರೀತಿಯಲ್ಲಿ ಫಲವತ್ತತೆಯಲ್ಲಿ ಅಂತರ್ವರ್ಧಕ ಹೆಚ್ಚುಗಾರಿಕೆಯನ್ನು ಉತ್ಪಾಧಿಸುವು ಸಾಧ್ಯತೆ ಇದೆ. ನೋಡಿ: ಲಾಜೋನಿಕ್ (1974), ಫೋಲ್ಬರ್ (1977).

15. ಅಂತಾರಾಷ್ಟ್ರೀಯ ಅಂಶಗಳ ಹೆಚ್ಚು ಸಂಪೂರ್ಣವಾದ ವ್ಯವಹಾರದ ಒಂದು ಪರ್ಯಾಯವಾದ ವಿಶ್ಲೇಷಣೆಗಾಗಿ ನೋಡಿ: ಡೆ ಜಾನ್‌ವ್ರಿ ಅವರ ಒಳನೋಟವನ್ನು ನೀಡುವ ಪ್ರಬಂಧ (1975). ಒಟ್ಟಾರೆ ಪರಿಣಾಮವೆಂದರೆ ಎಲ್ಲ ಸರಕುಗಳು ಅಥವಾ ಅವುಗಳ ಹತ್ತಿರವಾದ ಪ್ರತಿವಸ್ತುಗಳನ್ನು ಬಿಕರಿಗಿಡಲಾಗುತ್ತದೆ ಎಂದು ನಾನು ಊಹಿಸುತ್ತೇನೆ.

16. ಕುಜ್ನೆಸ್ (1963) ಮತ್ತು ಸ್ವಾಮಿ (1967). VT ಮತ್ತು VC = ಅನುಕ್ರಮವಾಗಿ ಸಾಂಪ್ರದಾಯಿಕ ಮತ್ತು ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲಿನ ಆದಾಯದ ವ್ಯತ್ಯಾಸಗಳ ಗುಣಾಂಕಗಳಾದರೆ, h = ಸಾಂಪ್ರದಾಯಿಕ ವಿಧಾನಕ್ಕೆ ಹೋಲಿಸಿದಾಗ ಬಂಡವಾಳಶಾಹಿ ವಿಧಾನದಲ್ಲಿನ ಪ್ರತಿ ಗ್ರಾಹಕ ಘಟಕದ ಸರಾಸರಿ ಆದಾಯವಾಗಿರುತ್ತದೆ, ಮತ್ತು $W_T$ and $W_C$ ಅನುಕ್ರಮವಾಗಿ ಸಾಂಪ್ರದಾಯಿಕ ಹಾಗೂ ಬಂಡವಾಳಶಾಹಿ ವಿಧಾನಗಳಲ್ಲಿ ಕಾರ್ಯ ನಿರ್ವಹಿಸುವ ಕುಟುಂಬಗಳ ಭಿನ್ನರಾಶಿಯಾಗಿರುತ್ತದೆ, ಆಗ V ಯ ಸಾಮಾಜಿಕ ರಚನೆಯಲ್ಲಿನ ವ್ಯತ್ಯಾಸಗಳ ಗುಣಾಂಕವನು ಹೀಗೆ ಅಭಿವ್ಯಕ್ತಗೊಳಿಸಬಹುದು:

$$V = \frac{[W_T V_T^2 + W_C V_C^2 h^2 + W_T W_C (h-1)^2]^{1/2}}{W_T + W_C h}$$

17. ಸಣ್ಣ ಮಿಗಿತಾಯ ಸಾಪೇಕ್ಷವಾದ, ಸಮಾನ ಆದಾಯದ ವಿತರಣೆಯ 'ವಿವರಣೆ'ಯನ್ನು ನೀಡುವುದಿಲ್ಲ ಎನ್ನುವುದು ನಿಜ. ಅದರ ವಿವರಣೆಗೆ ನಾನಿಲ್ಲಿ ಪ್ರಯತ್ನಪಡುವುದಿಲ್ಲವಾದರೂ ಎರಡನ್ನೂ ಅವು ಮೂಲದ ಉತ್ಪಾದನಾ ವಿಧಾನದ ಅಭಿವ್ಯಕ್ತಿ ಎಂದು ಅರ್ಥ ಮಾಡಿಕೊಳ್ಳಬಹುದು. ಸಾಂಪ್ರದಾಯಿಕ ಉತ್ಪಾದನಾ ವಿಧಾನದಲ್ಲಿನ ನಿಜವಾದ ಆದಾಯದ ಸಾಪೇಕ್ಷವಾದ ಸಮಾನ ವಿತರಣೆಯು ಜಿನಿ ಗುಣಾಂಕ ಮತ್ತು ಕೂಲಿಗಾಗಿ ಕೆಲಸ ಮಾಡುತ್ತಿರುವ ಕಾರ್ಮಿಕರ ಶೇಕಡಾವಾರುಗಳ ನಡುವಿನಲ್ಲಿರುವ ಬಡ ಹಾಗೂ ಮದ್ಯಮ ಆಧಾಯದ ದೇಶಗಳ ಹಲವು ವಿಭಾಗಗಳನ್ನೊಳಗೊಂಡ ಅಧ್ಯಯನದಲ್ಲಿ ಧನಾತ್ಮಕ ಫಲವನ್ನು ನೀಡುತ್ತದೆ. ಕ್ರಾಮ್‌ವೆಲ್ (1976).

18. ಸಂಪೂರ್ಣ ಚರ್ಚೆಗಾಗಿ ನೋಡಿ: ಅಮೀನ್ (1976). ನನಗನಿಸುವಂತೆ ವಿತರಣಾ ಪ್ರಕ್ರಿಯೆಯ ಈ ವ್ಯಾಖ್ಯಾನವು ಆದಾಯ ಅಸಮಾನತೆಯ ಮೇಲ್ನೋಟಕ್ಕೆ ಕಾಣುವ ಬಂಡವಾಳಶಾಹಿ ಬೆಳವಣಿಗೆಯಲ್ಲಿ ಮೊದಲಿಗೆ ಹೆಚ್ಚಾಗುವುದು ಮತ್ತು ನಂತರ ಕಡಿಮೆಯಾಗುವ ಧೋರಣೆಯು (ಕುಜ್ನೆಟ್‌ನ ಪ್ರಖ್ಯಾತ U - ಆಕಾರದ ವಿನ್ಯಾಸ) ಒಂದು ಒಳ್ಳೆಯ ವಿವರಣೆಯಾಗಿದೆ. ಕ್ರಮೇಣ ಕಡಿಮೆಯಾಗುತ್ತಾ ಹೋಗುವುದು ಸಾಂಪ್ರದಾಯಿಕ ಉತ್ಪಾದನಾ ವಿಧಾನದ ಸಾಪೇಕ್ಷ ಗಾತ್ರದೊಂದಿಗೆ ಮೀಸಲು ಪಡೆಯ ಸಾಪೇಕ್ಷ ಕುಗ್ಗುವಿಕೆಯ ಪರಿಣಾಮವಾಗಿರುತ್ತದೆ.

19. ಆರ್ಥಿಕತೆಯ ಮುಕ್ತ ಸ್ವರೂಪ - ಎಲ್ಲ ಸರಕುಗಳು ಮತ್ತು ಅವುಗಳ ಹತ್ತಿರದ ಪ್ರತಿವಸ್ತುಗಳು ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಲಭ್ಯವಿರುತ್ತವೆ ಎನ್ನುವ - ಊಹೆಯು ಇಲ್ಲಿ ನಿರ್ಣಾಯಕವಾಗಿರುತ್ತದೆ. ಅದಲ್ಲದೆ ವಿವಿಧ ಕುಟುಂಬಗಳ ಸದಸ್ಯರು ವಿವಿಧ ಉತ್ಪಾದನ ವಿದಾನದಲ್ಲಿ ತೊಡಗಿರುವವರಿಗೆ ಮತ್ತು ಕುಟುಂಬವು ಸಂಗತವಾದ ಅನುಭೋಗಿ ಘಟಕವಾಗಿರುವವರಿಗೆ, ಈ ವಿಶ್ಲೇಷಣೆಯು ಅಪೂರ್ಣವಾಗಿರುತ್ತದೆ. ನೋಡಿ ಡೀರೆ (1976) ಎಂಬಿಲಿನಿ (1976), ಮತ್ತು ಮಿಲ್ಲೊಸಾಕ್ಸ್ (1975). ಈ ವಿದ್ಯಮಾನವು ಪ್ರಚಲಿತವಾಗಿರುವಾಗ ಸಾಂಪ್ರದಾಯಿಕ ಉತ್ಪಾದನಾ ವಿಧಾನದಲ್ಲಿ ಹೆಚ್ಚಾಗುತ್ತಾ ಹೋಗುವುದು ಸಾಂಪ್ರದಾಯಿಕ ಕುಟುಂಬಗಳ ಕನಿಷ್ಠ ಅಗತ್ಯವನ್ನು ನೇರ ಉತ್ಪಾದನೆಯ ಮೂಲಕ ಗಳಿಸಬಹುದಾದ್ದರಿಂದ ಕೂಲಿಯನ್ನು ಕಡಿಮೆ ಮಾಡಲು ಒತ್ತಡವನ್ನು ಹೇರುತ್ತದೆ. ಈ ಸಂದರ್ಭದಲ್ಲಿ ಕುಟುಂಬದ ಘಟಕಗಳ ಮೂಲಕ ಎರಡು ಉತ್ಪಾದನಾ ವಿಧಾನಗಳ ನೇರ ಸಂಬಂಧವು ಮಾರಕಟ್ಟೆಗಳ ಮೂಲಕ ನಡೆಯುವ ಅಪರೋಕ್ಷ ಸಂಬಂಧಕ್ಕೆ ಪೂರಕವಾಗಿರುತ್ತದೆ ಮತ್ತು ಕೆಲವೊಮ್ಮೆ ಅದನ್ನು ಮೀರಿ ಹೋಗುತ್ತದೆ, ಹಾಗಾಗಿ ಇದು ಬೆಲೆಗಳ ಬಾಹ್ಯ ನಿರ್ಧರಣೆಯ ಪ್ರಾಮುಖ್ಯತೆಯನ್ನು ಕಡೆಗಣಿಸುತ್ತದೆ.

20. ಇದು ಫೊಲ್ಬ್ರೆ (1977) ಅವರ ಮೆಕ್ಸಿಕನ್ ಕ್ಷೇತ್ರಾಧ್ಯಯನದಲ್ಲಿ ಸೂಚಿತವಾಗಿದೆ.

21. ವ್ಯಾಪಕವಾಗಿ ಒಪ್ಪಿಕೊಳ್ಳಲಾಗಿರುವ ಈ ಪ್ರಸ್ತಾವನೆಯ ಬಗ್ಗೆ ಇರಬಹುದಾದ ಹಲವಾರು ಅಪವಾದಗಳ ಬಗ್ಗೆ ನಾವು ಯೋಚಿಸಬಹುದು. ಜಪಾನಿನ ಬಂಡವಾಳಶಾಹಿ ಆರ್ಥಿಕತೆಯ ಯಶಸ್ಸಿಗೆ ಅಲ್ಲಿನ ಬಂಡವಾಳಶಾಹಿಪೂರ್ವದ ಆರ್ಥಿಕತೆಯನ್ನು ಆಧರಿಸಿದ ಕೌಶಲಗಳು ಮತ್ತು ಮೌಲ್ಯಗಳು ಅತ್ಯಂತ ಕೇಂದ್ರದಲ್ಲಿವೆ. ನೋಡಿ ಸ್ಮಿತ್ (1959), ಅಬೆಗ್ಲೆನ್ (1958) ಮತ್ತು ಬೆಲ್ಲಾ (1957). ಗೀರ್ಜ್‌ನು (1976) ತನ್ನ ಇಂಡೋನೇಷಿಯಾದ ಅಭಿವೃದ್ಧಿಯ ತುಲನಾತ್ಮಕ ಅಧ್ಯಯನದಲ್ಲಿ ಇದೇ ವಾದವನ್ನು ಮಂಡಿಸುತ್ತಾನೆ.

22. ಇದು ಮತ್ತು ನಂತರದ ವಿಭಾಗದ ವಾದಗಳನ್ನು ಬೌಲ್ಸ್ ಮತ್ತು ಗಿಂಟಿಸ್ (1976) ಅವರ ಕ್ಷೇತ್ರಾಧ್ಯಯನವನ್ನು ಆಧರಿಸಿ ವಿವರವಾಗಿ ಮಂಡಿಸಲಾಗಿದೆ.

23. ನೋಡಿ: ಥಾಮ್ಸನ್ (1967), ಗುಟ್‌ಮನ್ (1973), ಮತ್ತು ಮೂರ್ (1960).

24. ಹೈಮರ್ (1970).

25. ನೋಡಿ: ಶ್ಕುಲ್ಜ್ (1964).

26. ಲೆನಿನ್ ಕಾಲದಿಂದಲೂ ಮಾರ್ಕ್ಸ್‌ನ ಸಾಹಿತ್ಯದಲ್ಲಿ 'ಶ್ರಮಿಕ ಶ್ರೀಮಂತಿಕೆ' ಯ ವಸ್ತುವಿಷಯವನ್ನು ಅಭಿವೃದ್ಧಿಪಡಿಸಲಾಗಿದೆ. ನೋಡಿ: ಅರ್ರಿಗಿ (1973).

27. ಮಾರ್ಕ್ಸ್ (1963) ಪು. 125. ಇದೇ ತರಹದ ಸಂಘರ್ಷವು ಇಂಗ್ಲೆಂಡಿನ ಚರ್ಚ್ ಮತ್ತು ಬಂಡವಾಳಶಾಹಿಗಳು ಹಾಗೂ ಭಿನ್ನಮತೀಯರು ಬೆಂಬಲಿಸಿದ ಶೈಕ್ಷಣಿಕ ಕಾರ್ಯಕ್ರಮದ ನಡುವೆ ನಡೆಯಿತು. ನೋಡಿ: ಕ್ರಿಕ್ (1975).

28. ನೋಡಿ: ಸಿಮ್ಮೊನ್ಸ್ (1977).

29. ನಗರ ಗ್ರಾಮಗಳ ನಡುವಿನ ತ್ಯಾಜ್ಯ ಪ್ರಮಾಣದ ವ್ಯತ್ಯಾಸಗಳಿಗಾಗಿ ನೋಡಿ ವಿಶ್ವ ಬ್ಯಾಂಕ್ (1974). ಸಂಪೂರ್ಣ ಗ್ರೇಡ್‌ಗಳನ್ನು ನೀಡುವ ಸಂಖ್ಯೆಯಲ್ಲಿನ ಪ್ರಾಥಮಿಕ ಶಾಲೆಗಳ ಶೇಕಡಾವಾರು ವ್ಯತ್ಯಾಸಗಳು ಮತ್ತು ವಿದ್ಯಾರ್ಥಿ -ಶಿಕ್ಷಕ ಪ್ರಾಥಮಿಕ; ದ್ವಿತೀಯ ಅನುಪಾತಗಳಲ್ಲಿರುವ ವ್ಯತ್ಯಾಸಗಳಿಗೆ ನೋಡಿ: ಯುನೆಸ್ಕೊ (1972).

30. ಇದನ್ನೂ ನೋಡಿ: ಬೌಲ್ಸ್ (1969). ಬೌಲ್ಸ್ (1971) ನಲ್ಲಿರಬಹುದಾದ ಆದಾಯದ ದರದ ಅಂದಾಜಿನ ಪೂರ್ವಗ್ರಹಿಕೆಯನ್ನು ನಾನು ಪರಿಗಣಿಸುತ್ತೇನೆ ಮತ್ತು ಸ್ಯಾಕರೊಪೊಲಾಸ್ ಮತ್ತು ಹ್ಯಾಡ್ಲಿಯ ಅಂದಾಜುಗಳ ಒಟ್ಟಾರೆ ವಿನ್ಯಾಸಕ್ಕೆ ಸಮನಾಗಿರುವ ಪರ್ಯಾಯವಾದ ಅಂದಾಜುಗಳ ಸರಣಿಯನ್ನು ನಾನು ಮಂಡಿಸುತ್ತೇನೆ. ಈ ಅಂದಾಜುಗಳಲ್ಲಿರುವ ಪೂರ್ವಗ್ರಹಿಕೆಗಳು ಪ್ರಾಥಮಿಕ ಶಿಕ್ಷಣಕ್ಕಿರುವ ಆದಾಯ ದರದ ಕಾಣ್ಕೆಯನ್ನು ವ್ಯವಸ್ಥಿತವಾಗಿ ವಿರಿಸುತ್ತವೆಯೆ ಎನ್ನುವುದು ಸಂದೇಹಾಸ್ಪದವಾಗಿದೆ. ಪೂರ್ವಗ್ರಹಿಕೆ ಯಾವ ದಿಕ್ಕಿನಲ್ಲಿ ಸಾಗುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಸೂಚಿಸಲಾಗದಿದ್ದರೂ ಏನೆ ಆದರೂ ಸರಿದೂಗುವಿಕೆಯಲ್ಲಿರುವ ಪೂರ್ವಗ್ರಹಿಕೆಯು ಉನ್ನತ ಶಿಕ್ಷಣದ ಆದಾಯದ ದರವನ್ನು ಅವಾಸ್ತವಿಕವಾಗಿ (ಉನ್ನತ ಮಟ್ಟದ ಆಡಳಿತಾಧಿಕಾರಿಗಳ ಹೆಚ್ಚಿನ ವೇತನಗಳಿಂದಾಗಿ ಮತ್ತು ಸ್ವದೇಶಿತರ, ರಾಜಕೀಯವಾಗಿ 'ಅಗತ್ಯವಾದ' ಎನ್ನುವುದರ ಸೂಚನೆ ಸಿಗುತ್ತದೆ. ವಿದೇಶಿ ಸಂಸ್ಥೆಗಳ ಸ್ಥಳೀಯ ನಿರ್ವಹಣಾಂಗದ ಉನ್ನತ ಮಟ್ಟದ ವೇತನಗಳಿಂದಾಗಿ) ಮತ್ತು ಪ್ರಾಥಮಿಕ ಶಿಕ್ಷಣದ ಆದಾಯ ದರವನ್ನು ಅವಾಸ್ತವಿಕವಾಗಿ ಕಡಿಮೆ ಮಾಡುತ್ತದೆ ( ಹೆಚ್ಚುವರಿ ಶ್ರಮಿಕರ ಆರ್ಥಿಕತೆಯಲ್ಲಿರುವ ಶಾಲಾಕಲಿಕೆಯಿಲ್ಲದ ಕಾರ್ಮಿಕರ ಸಾಮಾಜಿಕ ಕನಿಷ್ಠ ಉತ್ಪಾದಕತೆಯ ಅತಿಮೌಲ್ಯಮಾಪನ ಮಾಡಿದ ಆದಾಯದ ಅಂದಾಜುಗಳ ಬಳಕೆಯಿಂದಾಗಿ).

31. ವಿಮರ್ಶೆಗಾಗಿ ನೋಡಿ: ಬೌಲ್ಸ್ (1969), ಈ ದತ್ತಾಂಶಗಳ ಪರ್ಯಾಯ ವ್ಯಾಖ್ಯಾನವನ್ನು ಕೊರ್ನಾಯ್ (1971) ಮತ್ತು ಭಗವತಿ (1973) ಇವರಲ್ಲಿ ನೋಡಿ.

32. ಯುನೆಸ್ಕೊ (1976).

33. ಬ್ಲಾಗ್ ಮತ್ತು ಇತರರು (1969).

34. ವಿಶ್ವ ಬ್ಯಾಂಕ್ (1974).

35. ವಿಶ್ವ ಬ್ಯಾಂಕ್ (1974) ಅನುಸೂಚಿ 5.

36. ಶ್ರಮಿಕ ಶಕ್ತಿಯ ಮೂಲ ದತ್ತಾಂಶವನ್ನು ಮುಖ್ಯವಾಗಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಘ (1966) ದಿಂದ ತೆಗೆದುಕೊಳ್ಳಲಾಗಿದೆ. ಶಾಲಾಕಲಿಕೆಯಲ್ಲಿರುವುದು ಯುನೆಸ್ಕೊ (1966ರಿಂದ) ಮತ್ತು (1968). ಅಡೆಲ್‌ಮನ್ ಮತ್ತು ಮೊರಿಸ್ (1967) ಅವರ ಸ್ವಲ್ಪ ಮಾರ್ಪಾಡು ಮಾಡಿದ ರೂಪವೆ ಸಾಂಪ್ರದಾಯಿಕ ಗಣ್ಯರ ವರ್ಗೀಕರಣವಾಗಿದೆ. 1957;62 ರ ಅವಧಿಯ ಬಹುಭಾಗದಲ್ಲಿ ಸಾಂಪ್ರದಾಯಿಕ ಮತ್ತು ಭೂ

ಒಡೆತನದ ಮತ್ತು/ಅಥವಾ ಇತರ  ಸಾಂಪ್ರದಾಯಿಕ ದೃಷ್ಟಿಕೋನದ ರಾಷ್ಟ್ರೀಯ ಗಣ್ಯರು ರಾಜಕೀಯವಾಗಿ ಪ್ರಬಲರಾಗಿದ್ದ ದೇಶಗಳನ್ನು 'ಸಾಂಪ್ರದಾಯಿಕ' ಎಂದು ವರ್ಗೀಕರಿಸಲಾಗಿದೆ. 'ಸಾಂಪ್ರದಾಯಿಕ ಗಣ್ಯರು . . . . ಎನ್ನುವುದು ಸಾಂಪ್ರದಾಯಿಕ ರಾಜಕೀಯ, ಸಾಮಾಜಿಕ, ಮತ್ತು  ಆರ್ಥಿಕ ಸಂಘಟನೆ ಮತ್ತು ಸಂಸ್ಥೆಗಳು ಮತ್ತು ಮೌಲ್ಯಗಳನ್ನು ಉಳಿಸಿಕೊಳ್ಳುವುದರ ಪರವಾಗಿದ್ದ ಸಾಂಪ್ರದಾಯಿಕ ಭೂ ಒಡೆತನದ ಗಣ್ಯರು ಮತ್ತು ಅಧಿಕಾರಶಾಹಿ,  ಧಾರ್ಮಿಕ ಮತ್ತು  ಸೈನ್ಯದ ಗಣ್ಯರನ್ನು ಒಳಗೊಂಡಿರುತ್ತದೆ' ಅಡೆಲ್‌ಮನ್ ಮತ್ತು ಮೊರಿಸ್ ಅವರ ಈ ಹೇಳಿಕೆಯು ಅವರು ಉಪಯೋಗಿಸಿದ ಮಾನದಂಡದ ಸಂಪೂರ್ಣ ವಿವರಣೆಯಾಗಿದೆ. ನನ್ನ ವರ್ಗೀಕರಣವು ಗಣ್ಯರ ಆರ್ಥಿಕ ತಳಹದಿಗೆ ಮತ್ತು ವಿಶೇಷವಾಗಿ ಅದರ ಉತ್ಪಾದನೆಯಲ್ಲಿ ಕೂಲಿ ಕಾರ್ಮಿಕರ ಸಾಪೇಕ್ಷ ಗೈರುಹಾಜರಿಗೆ, ಮತ್ತು ವಿಶ್ವ ಆರ್ಥಿಕತೆಯಲ್ಲಿ ಸಮಗ್ರಗೊಳ್ಳುವುದರಲ್ಲಿ ಇರುವ  ಕೊರತೆಗೆ ಹೆಚ್ಚು ಒತ್ತು ಕೊಡುವುದರಿಂದ ಅದಕ್ಕಿಂತ ಬಿನ್ನವಾಗಿದೆ.

37. ನಿರ್ದಿಷ್ಟವಾದ ಕಮ್ಯುನಿಷ್ಟ್ ದೇಶಗಳ ಶೈಕ್ಷಣಿಕ ಇತಿಹಾಸಗಳು ಕಮ್ಯುನಿಷ್ಟ್ ಚರಾಂಶದ ಮಹತ್ವವನ್ನು ಕೂಡ ಸೂಚಿಸುತ್ತವೆ. ಉದಾಹರಣೆಗೆ ನೋಡಿ: 1959ರ ನಂತರದ ಕ್ಯೂಬಾದ ಶಿಕ್ಷಣ ಕುರಿತನನ್ನ ವಿಶ್ಲೇಷಣೆ. ಬೌಲ್ಸ್ (1971)

38. ಭಾರತದಲ್ಲಿ ಉನ್ನತ ಶಿಕ್ಷಣದ 'ಮಿತಿಮೀರಿದ;ವಿಸ್ತರಣೆ'ಯ ಪರಿಣಾಮದಿಂದಾಗಿ ವಿಶ್ವವಿದ್ಯಾಲಯದ ಪದವಿಧರರ ನಿರುದ್ಯೋಗ ಮುಂದುವರೆದುಕೊಂಡು ಬರುತ್ತಿರುವುದಕ್ಕೆ ಇದು ವಿವರಣೆಯಾಗಬಹುದು. ನೋಡಿ: ಬ್ಲಾಗ್ ಮತ್ತು ಇತರರು (1969).

**ಪರಾಮರ್ಶನೆಗಳು**


Abegglen, James, The Japanese Factory; Aspects of its Social Organizarion (Glencoe: The Free Press, 1958).

Adelman, irma and Morris, Cynthia T., Society, Politics, and Economic Development (Baltimore: Johns Hopkins Press, 1967).

Althusser, Louis, Lenin and Philosophy, and Other Essavs (London: New Left Books, 1971).

Amin, Sam.ir, Unequal Development: An E&oy on Ihe Social Formarions of Peripheral Capitalism (New York: Monthly Review Press, 1976).

Arrighi, Giovanni, 'International corporations labor aristocracies and economic labour development in tropical Africa', in Giovanni Arrighi and John Saul, Essays on the Polirical Economy of Africa (New York: Monthly Review Press, 1973).

Baudelot, Christian and Establet, Roger, L'Ecole Capiraliste en France (Paris: Maspero, 1973).

Becker, Gary, Human Gzpiral and the Personal Distri; bution of income, (Ann Arbor: Institute of Public Administration, 1967).

Bellah, Robert, Tokugawo Religion: The Values of Pre;Indusrrial Japon (Glencoe: The Free Press, 1957).

Bhagwati, Jagdish, 'Education, class structure and income inequality', World Development, Vol. 1, No. 5 (1973).

Blaug, Mark, et al., The Causes of Graduate Unem; ployment in India (London: Allen Lane, 1969).

Bowles, Samuel, Planning Educational Systems for Economic Growth (Cambridge: Harvard University Press, 1969).

Bowles, Samuel, 'Class power and mass education', Harvard University, mimeo (1971).

Bowles, Samuel. 'Cuban education and the revolution; ary ideology', Harvard Education Review, Vol. 4 1, No. 4 (November 1971), pp. 472;500)

Bowles, Samuel, and Gintis, Herbert, Schooling in Copiralist America: Educarional Reform and the Controdicrions of Economic Life (New York: Basic Books, 1976).

Carnoy, Martin, Education as Cultural Imperialism (New York: McKay, 1974). Carnoy, Martin, 'Class analysis and investment in human resources', Review of Radical Political Economics, Vol. 3 (Fall;Winter, 1971), p. 56;81.

Chenery, Hollis, et al. Redistribution with Growth (Oxford: Oxford University Press, 1974).

Coombs, Philip, The World Educational Crisis (New York: Oxford University Press, 1968).

Coombs, Philip, New Paths lo Learning (New York: Praeger, 1975).

Cromwell, Jerry, 'The size distribution of income: an international comparison', Department of Economics, Harvard University, mimeo (1976.).

Dasgupta, Asim, 'Income distribution, education, and capital accumulation', World Bank, Washington, D.C., mimeo (1974).

Dobb, Maurice, Studies in the Developmenr of Capi; talism (New York: International Publishers, 1974J.

Deere, Carmen Diana, 'Women's subsistence produc; tion in the capitalist periphery', Review of Radical Political Economics, Vol. 8. No. 1 (Spring 1976). pp. 9; 17.

e Janvry, Alain, 'The political economy of rural development in Latin America: an interpretation', American Journal of Agricultural Economics, Vol. 57, No. 3 (August 1975), pp. 490;499.

Dobb, Maurice, Studies in the Developmenr of Capi; talism (New York: International Publishers, 1974).

Folbre, Nancy, 'Capitalist development and popula; tion growth in Zongolica, Vera Cruz', Lorin American Perspecrives (Summer, 1977).

GaJbraith, J. K., 'Power and the useful economist', American Economic Review, Vol. 63, No. 1, (March 1973), pp. I; 11.

Geertz, Clifford, Pedlers and Princes: Social Change and Economic Modernization in Two Indonesian Villages (Chicago: University of Chicago Press, 1963).

Gutman, Herbert, industrializing America, 'Work, culture and society in 18 1 S; 19 19', American Hisrorical Review (June 1973), pp. 531;588.

Hadley, Lawrence, 'A comparative study of rates of return to education in less developed nations', University of Conn., mimeo (1976).

Hindess, Barry and Hirst, Paul Q., Pre;Capitalist Modes of Production(London: Routledge and Kegan Paul, 1975).

Hymer, Stephen, 'The multinational corporation and the international division of labour', Department of Economics, Yale University, unpublished paper (1970).

International Labour Organization, Yearbook of Labour Storisiics 1965 (Geneva: ILO, 1966).

Katz, Michael, The Irony of Early School Reform (Cambridge: Harvard University Press, 1975).

Kolko,. Gabriel, TNe Triumph of Conservarism (Chicago: Quadrangle, 1963).

Kuznets, Simon, 'Quantitative aspects of the economic growth of nations: distribution of income by size', Economic Development (January 1963).

Lazonick, William. 'Karl Marx and enclosures in England', The. Review Economics. of Radical Political Vol. 6. No. 2 (Summer 1974). pp. I;32.

Lenin, V. I., State and Revolution (New York: Inter; national Publishers, 1932).

Lerner, Abba, 'The economics and politics of con; sumer sovereignty', American Economic Review (May 1972).

Marx, Karl, Pre;Capitalist Economic (London: Lawrence and Wishart, 1964).

Marx, Karl, The Eighteenth Brumaire Bonaparte (New York: International Formations of Louis Publishers, 1963).

Marx, Karl and Engels, Friedrick, 'The Communist Manifesto' in R. C. Tucker (ed.), The Marx;Engels Reader (New York: Norton, 1972), pp. 331;361.

Mbilinyi, Marjorie, 'Women: producers and repro ducers in underdeveloped capitalist systems', University of Dar es Salaam, mimeo (1976).

Meillassoux, Claude, Femmes, Greniers, et Capitaux (Paris: Maspero, 1975).

Milliband, Ralph, The State in Capitalist Society (London: Weidenfeld and Nicolson, 1969).

Moore, Wifbert (ed.), Labour Commitment and Social Change in Developing Areas (New York: Social Science Research Council, 1960).

Poulantzas, Nicos, Pouvoir Politique et Classes Sociales (Paris: Masuero, 1968).

Psadharopoulos, International George, Returns to Education: An Comparison (San Francisco: Jossey Bass, 1973).

Quick, Paddy, 'Educational and industrialization 19th century in England and Wales', unpublished doctoral dissertation, Harvard University (1975).

Samuelson, Paul, 'Wage and interest: a modern dissection Marxian economic of Economic Review (December 1957).

Schultz, models', American T. W., Transforming Traditional Agriculture (New Haven: Yale University Press, 1964).

Simmons, John, 'Can education promote develop ment?', Proceedings of the Fourth International Health Conference Washington: May 1977).

Simon, Brian, Studies in the History of Education, 1780;1870 (London: Lawrence Wishart, 1960).

Smith, Thomas, 7'he Agrarian Origins of Modern Japan (Stanford: Stanford University Press, 1959).

Swamy, S., 'Structural changes and the distribution of income by size: the case of India', Review of Income and Wealth (June 1967), pp. ISS; 174.

Terray, Emmanuel, Marxism and %nitive' Societies (New York: Monthly Review Press, 1972).

Thompson, E. P., 'Time, work;discipline and industrial capitalism', Past and Present, No. 38 (December 1967), pp. 56;97.

Thurow, Lester, Generating Inequality (New York: Basic Books, 1975).

Tyack, David, The One Best System: A History of American Urban Education (Cambridge: Harvard University Press 1974).

UNESCO, Statistical Yearbook, 1965 and 196 7, I9 71 s and 1975 (Paris: UNESCO, 1966, 1968, 1972 and 1976).

Weinstein, James, The Corporate Ideal and the Liberal (Boston: Beacon, 1968). State, 1900;1918

World Bank, 'Education sector working paper', (Washington, D. C.: 1974).

World Bank, 'Report of the basic economic mission' (Tunisia) (Washington, D. C.: 1974a).

World Bank, 'Report of the basic economic mission' (Pakistan) (Washington, D. C.: 1977).

Zimbalist, Andrew, 'La expansion de la education primaria y el desarrollo capitalista: el case de Chile', Revista de1 Centro de Estudios Educativos, Vol. 3, No 2 (1973), pp. 51;72.